ಅನುಮೋದನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್.—ಕರ್ನಾಟಕ ರಾಜ್ಯ ನ್ಯಾಯಾಲಯಗಳ ಶುಲ್ಕ ಮತ್ತು ದಾವಾಗಳ ಬೆಲೆ (ತಿದ್ದುಪಡಿ) ವಿಧೇಯಕ ೧೯೮೩ನ್ನು ಅನುಮೋದಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು.—ಪ್ರಸ್ತಾವನೆಯೆಂದರೆ—''ಕರ್ನಾಟಕ ರಾಜ್ಯ ನ್ಯಾಯಾಲಯಗಳ ಶುಲ್ಕ ಮತ್ತು ದಾವಾಗಳ ಬೆಲೆ (ತಿದ್ದುಪಡಿ) ವಿಧೇಯಕ ೧೯೮೩ನ್ನು ಅನುಮೋದಿಸುವುದು''

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಅನುಮೋದನೆ ನೀಡಲಾಯಿತು.

ಕರ್ನಾಟಕ ಅಭಿವೃದ್ಧಿ ಮಂಡಲಿಯ (ತಿದ್ದುಪಡಿ) ವಿಧೇಯಕ 1983 ಪರ್ಯಾಲೋಚನೆ ಪ್ರಸ್ತಾವ

ಶ್ರೀ ಎಂ. ಚಂದ್ರಶೇಖರ್.—''೧೯೮೩ನೇ ಕರ್ನಾಟಕ ಅಭಿವೃದ್ಧಿ ಮಂಡಲಿಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ''

ಪ್ರಸ್ತಾವವನ್ನು ಸೂಚಿಸಲಾಯಿತು

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಇದರಲ್ಲಿ ಎರಡು ವಿಷಯಗಳಿವೆ. ಮೊದಲನೆಯದು ನಗರಾಭಿವೃದ್ಧಿ ಮಂಡಲಿಗಳ ಅಧ್ಯಕ್ಷರ ಮತ್ತು ಮಂಡಲಿಯ ಆರ್ಥಿಕ ಅಧಿಕಾರ ಹೆಚ್ಚು ಮಾಡುವುದು. ಇದುವರೆಗೆ ೧೦ ಸಾವಿರದಿಂದ ೨೫,೦೦೦ ವರೆಗೆ ಏನಿತ್ತು, ಅದನ್ನು ೫೦,೦೦೦ ದಿಂದ ಎರಡು ಲಕ್ಷಕ್ಕೆ ಹೆಚ್ಚಿಸಿ ಅನುಕೂಲ ಮಾಡಿಕೊಡುವುದು. ಇನ್ನು ಎರಡನೆಯದು ಬಡಾವಣೆಗಳನ್ನು ಮಾಡುವ ಸಲುವಾಗಿ ಯಾವುದೇ ಜಮೀನುಗಳನ್ನು ಸ್ವಾಧೀನ ಮಾಡಿಕೊಳ್ಳಬೇಕಾದರೂ ಪ್ರತಿಯೊಂದು ಕೂಡ ಸರ್ಕಾರಕ್ಕೆ ಬರಬೇಕಾಗಿತ್ತು. ಈ ಕಾನೂನು ಪ್ರಕಾರ ಜಿಲ್ಲಾಧಿಕಾರಿಗಳು ಮತ್ತು ವಿಭಾಗಾಧಿಕಾರಿಗಳಿಗೆ ಕ್ರಮವಾಗಿ ೫ ಮತ್ತು ೧೦ ಹೆಕ್ಟೇರ್ ಭೂಮಿಯನ್ನು ಕೊಂಡುಕೊಳ್ಳುವಂಥ ಅಧಿಕಾರ ಕೊಡಲಾಗಿದೆ. ವಿಕೇಂದ್ರೀಕರಣದಿಂದ ಕೆಲಸ ಕೂಡ ಸುಲಲಿತವಾಗಿ ನಡೆಯುವುದಕ್ಕೆ ಅವಕಾಶ ವಾಗುತ್ತದೆ.

ಶ್ರೀ ವೈ. ರಾಮಕೃಷ್ಣ.—ಮಾನ್ಯ ಅಧ್ಯಕ್ಷರೇ, ಈ ಮಂಸೂದೆಯ ಮೂಲಕ ಬೋರ್ಡಿನ ಅಧ್ಯಕ್ಷರಿಗೆ ಮತ್ತು ಬೋರ್ಡಿಗೆ ಹೆಚ್ಚಿನ ಹಣಕಾಸಿನ ಅಧಿಕಾರವನ್ನು ಕೊಡುವುದಕ್ಕೆ ಹೊರಟಿದ್ದಾರೆ. ಏತಕ್ಕೋಸ್ಕರ ಕೊಡಬೇಕೆನ್ನುವುದನ್ನು ಹೇಳಲಿಲ್ಲ. ೧೦,೦೦೦ ಇದ್ದುದು ೫೦,೦೦೦ ವಿತಕ್ಕೆ ಕೊಡ ಬೇಕು ? ೫೦,೦೦೦ ಇದ್ದುದು ೨ಲಕ್ಷ ವಿತಕ್ಕೆ ಕೊಡಬೇಕು ? ಈಗ ಇರತಕ್ಕ ನಿಯಮದ ಪ್ರಕಾರ ೧೦,೦೦೦ ಹಾಗೂ ೨೦,೦೦೦ಬೆಲೆಯ ಕೆಲಸಗಳನ್ನು ಹರಿಜನರು, ಹಿಂದುಳಿದ ವರ್ಗದವರು ಹಾಗೂ ಹರಿ ಜನರ ಸೊಸೈಟಿಗಳು ಇದ್ದರೆ ಅವರಿಗೆ ಕೊಡಬೇಕೆಂದು ಇದೆ. ಈ ರೀತಿ ವಿಸ್ತರಣೆ ಮಾಡುವುದರಿಂದ, ಆ ಒಂದು ವರ್ಗಕ್ಕೆ ಸಾಮಾಜಿಕ ನ್ಯಾಯ ದೊರಕಿಸಿದಂತಾಗುವುದಿಲ್ಲ. ಲಿಮಿಟೇಷನ್ ಕೂಡ ವಿರಿಸುವುದಾದರೆ ನಮ್ಮ ಅಭ್ಯಂತರ ಇಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಯವರು ಆಶ್ವಾಸನೆ ಕೊಡುತ್ತಾರೆಯೇ ? ಈಗ ತಂದಿರುವ ಕಾನೂನು ಪ್ರಕಾರ ಹರಿಜನರ ಸೊಸೈಟಿಗಳಿಗೂ ಕೊಡುತ್ತೇವೆಂದರೆ ನಮ್ಮ ಆಕ್ಷೇಪಣೆಯಿಲ್ಲ. ಎರಡನೆಯದು ೫ ಹೆಕ್ಟೇರ್ಸ್ ಅಂದರೆ ಸುಮಾರು ೧೨ ಎಕರೆ ಜಮೀನನ್ನು ಅಗ್ರಿಮೆಂಟ್ ಮೂಲಕ ತೆಗೆದುಕೊಳ್ಳಬೇಕೆಂದು ಹೇಳಿದ್ದೀರಿ ; ಇದರಿಂದ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಹಾಲಿ ಇರತಕ್ಕ ಕಾನೂನಿನಲ್ಲಿ ಎಮರ್ಜೆನ್ಸಿ ಆಕ್ವಿಜಿಷನ್ ಮಾಡುವುದಕ್ಕೆ ಅವ ಕಾಶ ಇದ್ದರೂ ಕೂಡ ಸೇಲ್ ಅಗ್ರಿಮೆಂಟ್ ವಿತಕ್ಕೆ ತಂದಿದ್ದೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ ನಾನು ಮಾಜಿ ಕಾನೂನು ಮಂತ್ರಿಯವರಿಗೆ ವಿನಯದಿಂದ ಹೇಳುತ್ತೇನೆ. ಹಾಲಿ ಇರುವ ಕಾನೂನಿನಲ್ಲಿ ಅವಕಾಶವಿದೆ, ಇಲ್ಲವೆಂದು ಹೇಳುತ್ತಿಲ್ಲ. ಪ್ರತಿಯೊಂದು ಸಮಯದಲ್ಲಿಯೂ ಅರ್ಧ ಸೆಂಟ್ ಭೂಮಿಯನ್ನು ಕೊಂಡುಕೊಳ್ಳಬೇಕಾದರೂ ಆಕ್ವಿಜಿಷನ್ ಪ್ರೊಸೀ ಡಿಂಗ್ಸ್‌ಗೆ ಹೋಗಬೇಕಾಗುತ್ತದೆ. ಬೆಲೆ ನ್ಯಾಯವಾಗಿದ್ದರೆ ಇದರಲ್ಲಿ ನೇರವಾಗಿ ಕೊಂಡುಕೊಳ್ಳುವು ದಕ್ಕೆ ಅವಕಾಶ ಮಾಡಿದೆ. ಪ್ರತಿಯೊಂದು ಪ್ರಮಾಣದ ಭೂಮಿಯನ್ನು ಕೊಂಡುಕೊಳ್ಳುವುದಕ್ಕೆ ಅವ ಕಾಶ ಇದೆ. Sir, now for any quantity of land that may be purchased

by the City Improvement Board, the proposal has got to come to the Government and ultimately the Government has to accord sanction. In order to remove this difficulty and to avoid the delay in purchasing the land, we have now amended section 34 to delegate powers to the local officers namely the Divisional Commissioners and the Deputy Commissioners to approve purchase of land by the Board by agreement between the Improvement Board and the seller so that the Improvement Boards do not have to send every such proposal to to Government for approval. According to the proposed amendment the Board may enter into an agreement with the previous approval of the Deputy Commissior of respective Division where the total area of such land does not exceed five hectares and of the Divisional Commissioner of the division where the total area of such .and exceeds five hectares but does not exceed ten hectares. That is all sought to be done here. This will obviate delays and further facilities easy acquisition of land by the Improvement Board for the purposes of improvement of urban areas.

ಶ್ರೀ ವೈ. ರಾಮಕೃಷ್ಣ —ಈಗ ಸ್ವಾಮಿ ೨೪ ಹೆಕ್ಟಾರ್ ಜಮೀನು ಇದೆ ಎಂದು ಇಟ್ಟುಕೊಳ್ಳಿ ಆಗ ಆದನ್ನು ೫–೫ ಹೆಕ್ಟಾರ್‌ನಂತೆ ೪ ಸಾರಿ ಕೊಂಡು ಕೊಳ್ಳಬಹುದಲ್ಲ ಇದರಿಂದ ಏನು ತೊಂದರೆ ಯಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ಟ್ಯಾಂಪ್ ಫೀ, ರಿಜಿಸ್ಟ್ರೇಷನ್ ಫೀ ಎಷ್ಟಾಗುತ್ತದೆ ?

ಶ್ರೀ ವೈ. ರಾಮಕೃಷ್ಣ.—ಈ ತಿದ್ದುಪಡಿಯಲ್ಲಿರತಕ್ಕ ತಮ್ಮ ಉದ್ದೇಶದ ಪ್ರಕಾರವಾಗಿ ಭೂಮಿ ಯನ್ನು ಸ್ವಾಧೀನಪಡಿಸಿಕೊಳ್ಳಬೇಕು ಎನ್ನುವುದಕೋಸ್ಕರವಾಗಿ ತಂದಿದ್ದೇವೆಂದು ಹೇಳುತ್ತಿದ್ದೀರಿ. ಆದರೆ ಲ್ಯಾಂಡ್‌ನ್ನು ಆಕ್ವೈರ್ ಮಾಡಿಕೊಂಡಾಗ ಆದಕ್ಕೆ ಬೆಲೆಯನ್ನು ನಿಗದಿ ಮಾಡತಕ್ಕವರು ಯಾರು? ೧೦ ಸಾವಿರ ಪರ್ ಹೆಕ್ಟಾರ್‌ಗೆ ಇದ್ದರೆ ಅದಕ್ಕೆ ಇವರು ೧ ಲಕ್ಷ ರೂಪಾಯಿಗಳನ್ನು ಕೊಟ್ಟರೂ ಸಹ ಆದನ್ನು ನಾವು ಈ ತಿದ್ದುಪಡಿ ಪ್ರಕಾರವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಅವರು ಮಾಡತಕ್ಕ ಕ್ರಮ ವನ್ನು ಯಾರೂ ಪ್ರಶ್ನೆ ಮಾಡುವ ಹಾಗೆಯೇ ಇರುವುದಿಲ್ಲ. ಅರ್ಬನ್ ಸೀಲಿಂಗ್ ಆಕ್ಟ್ ಪ್ರಕಾರವಾಗಿ ೧೦ ಸಾವಿರ ಪರ್ ಹೆಕ್ಟಾರ್‌ಗೆಂದು ಇದ್ದರೆ ಇವರು ೨ ಲಕ್ಷ ರೂ. ಗಳನ್ನು ಕೊಡಬಹುದಾಗಿದೆ. ಆದುದರಿಂದ ಇದರ ಬಗ್ಗೆ ತಾವು ಏನು ಹೇಳಂತ್ತೀರಿ ?

ಶ್ರೀ ಕೆ. ಎಚ್. ರಂಗನಾಥ್.—ಸ್ವಾಮಿ ತಾವು ಈ ಕಾನೂನಿನ ಪ್ರಕಾರವಾಗಿ ಅವರಿಗೇನೋ ಹೆಚ್ಚಿನ ಅಧಿಕಾರವನ್ನು ಕೊಡುತ್ತಿದ್ದೀರಿ, ಡಿವಿಜನಲ್ ಕಮಿಷನರ್, ಡೆಪ್ಯೂಟಿ ಕಮಿಷನರ್‌ರವರ ಪತ್ತಿರ ಹೋಗುವ ಬದಲು ಛೇರ್ಮನ್‌ರವರಿಗೇ ಈ ಪವರ್ ಇರಲಿ ಎಂದು ಮಾಡಿದ್ದೀರಿ ಸಂತೋಷ ಇದು ಹೇಳುವುದಕ್ಕೇನೋ ಬಹಳ ಚೆನ್ನಾಗಿದೆ ತಮಗೊಂದು ಉದಾಹರಣೆಯನ್ನು ಹೇಳಬೇಕೆಂದರೆ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಖರೀಬು ಭೂಮಿ ಎಂದು ಸರ್ಕಾರಿ ಭೂಮಿ ಎಂದು ಆಕ್ವಿಜೆಷನ್ ಮಾಡಿ ಒಬ್ಬ ಅಧಿಕಾರಿ ಸಿಕ್ಕಿಹಾಕಿ ಕೊಂಡು ದೊಡ್ಡ ಗೊಂದಲ್ಲ ಆಗಿದ್ದು ತಮಗೆಲ್ಲಾ ಗೊತ್ತಿದೆ ಇದರ ಬಗ್ಗೆ ಅಧಿಕಾರಿಗಳ ಹತ್ತಿರ ಹೋಗಿ ಬರಬೇಕಾದರೆ ತಡವಾಗುತ್ತೆದೆ ಆದುದರಿಂದ ಇವರೇ ಕ್ಲುಪ್ತವಾದ ಸಮಯದಲ್ಲಿ ಕೆಲಸ ವಾಗುತ್ತದೆಂದು ಮಾಡಿದ್ದೀರಿ. ಆದರೆ ಸ್ವಾಮಿ ನನ್ನ ಅನುಭವದಲ್ಲಿ ಹೇಳುವುದಾದರೆ ಬಿ.ಐ.ಟಿ.ಬಿ.ನಲ್ಲಿ ಇದ್ದಾಗ ಅಮಲು ಜಾರಿ ಮಾಡಿ ಕರ್ಫ್ಯೂ ಜೇರ್‌ಗಳನ್ನು ಸಹ ಅಟ್ಯಾಚ್ ಮಾಡಿಸಿದ್ದು ಉಂಟು. ವೈಯಾಳಿ ಕಾವಲ್‌ನ ಒಬ್ಬ ದಿ. ಎಸ್. ಕೃಷ್ಣಪ್ಪ ಎನ್ನುವವರಿಗೆ ಕಾಂಪನ್‌ಸೇಷನ್ ಎಷ್ಟು ಬಂತು ಎಂಬುದನ್ನು ತಾವು ಲೆಕ್ಕ ತೆಗೆದು ನೋಡಿದರೆ ಆರ್ಥವಾಗುತ್ತದೆ. ಆಧಿಕಾರಿಗಳು ವಿ.ಸ್ ಯೂಜ್ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಿ ಆದನ್ನು ತಪ್ಪಿಸುವುದಕೋಸ್ಕರವಾಗಿ ಛೇರ್ಮನ್‌ರವರಿಗೆ ತಾವು ಈ ಪವರ್‌ನ್ನು ಕೊಟ್ಟರೆ ಅವರು ವಿಸ್ ಯೂಜ್ ಮಾಡುವುದಿಲ್ಲವೆಂದು ಹೇಳುವುದಕ್ಕೆ ತಮಗೆ ಏನು

ಗ್ಯಾರಂಟಿ ಇದೆ ? ಆದುದರಿಂದ ಈಗಿರತಕ್ಕ ಕಾನೂನಿನ ಪ್ರಕಾರವೇ ಳ-ಳಿ ಹೆಕ್ಟಾರ್‌ನಂತೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಆಗುವುದಿಲ್ಲವೇ ? ಆದುದರಿಂದ ಇದರ ಬಗ್ಗೆ ತಾವು ದಯವಿಟ್ಟು ಇನ್ನೊಮ್ಮೆ ವಿಚಾರ ಮಾಡಿ ನೋಡಿ. ಸ್ಪೆಷಲ್ ಆಕ್ವಿಜಿಷನ್ ಆಕ್ಟ್ ಎಂದು ಇದೇ ಉದ್ದೇಶದಿಂದಲೇ ಮಾಡಿರತಕ್ಕದ್ದು.

ಶ್ರೀ ಎಚ್. ಗಂಗಾಧರನ್.—ಸ್ವಾಮಿ, ಅಧ್ಯಕ್ಷರೇ, ಹಿಂದಿನ ಕಾನೂನಿನ ವ್ಯಾಪ್ತಿಯೊಳಗೆ ೧೦ ಸಾವಿರ ರೂ. ಗಳವರೆಗೆ ಅವರಿಗೆ ಲಿಮಿಟ್ ಇತ್ತು. ಆದರೆ ಈಗ ಜಮೀನಿನ ಬೆಲೆ ಏನಾಗಿದೆ, ಎಂಬುದನ್ನು ಲೆಕ್ಕ ಹಾಕಿದರೆ ಗೊತ್ತಾಗುತ್ತದೆ. ಕಳೆದ ೧೨ ವರ್ಷಗಳ ಹಿಂದೆ ಇದ್ದ ಬೆಲೆ ಇವತ್ತು ಅದರ ೧೦ ರಷ್ಟು ಆಗಿದೆ. ಹಿಂದಿನ ರೇಟ್‌ನಲ್ಲಿ ಈಗ ಜಮೀನುಗಳನ್ನು ಆಕ್ವಿಜೈರ್ ಮಾಡಿಕೊಳ್ಳುವುದಕ್ಕೇ ಆಗುವುದಿಲ್ಲ, ಸೈಟ್‌ಗಳನ್ನು ಸಂಚುವುದಕ್ಕೆ ಸಾಧ್ಯವಾಗುವುದಿಲ್ಲ ಈ ಪರಿಸ್ಥಿತಿ ಬೆಂಗಳೂರು, ಮೈಸೂರು ಮತ್ತು ಮಂಗಳೂರು ನಗರದಲ್ಲೆಲ್ಲಾ ಇದೆ. ಇದರಿಂದಾಗಿಯೇ ಸೈಟ್‌ಗಳನ್ನು ಹಂಚುವುದಕ್ಕೆ ಆಗಿಲ್ಲ. ಎರ್ಮೆಜೆನ್ಸಿ ಆಕ್ಟ್ ಇದೆ ಅದನ್ನು ಉಪಯೋಗಿಸಿಕೊಂಡು ಮಾಡಬಹುದೆಂದು ಮಾನ್ಯ ಸದಸ್ಯರು ಹೇಳಬಹುದು, ಅದು ಇದ್ದರೂ ಕೂಡ ಅಕ್ಕಪಕ್ಕದ ಜಾಗವನ್ನು ಆಕ್ವಿಜೈರ್ ಮಾಡಿಕೊಂಡಿರುತ್ತೇವೆ ಆದರೆ ಮಧ್ಯದವರು ಹೈಕೋರ್ಟಿಗೆ ಹೋದರೆ ಅದನ್ನು ಆಕ್ವಿಜೈರ್ ಮಾಡಿಕೊಳ್ಳುವುದಕ್ಕೆ ಆಗದಿದ್ದರೆ ಆಗ ಆ ಏರಿಯಾವನ್ನು ಡೆವಲಪ್ ಮಾಡುವುದಕ್ಕೆ ಆಗುವುದಿಲ್ಲ. ಅಲ್ಲಿ ರಸ್ತೆ ಮಾಡಿಸುವುದಕ್ಕಾಗುವುದಿಲ್ಲ, ನೀರನ್ನು ಕೊಡುವದಕ್ಕಾಗುವುದಿಲ್ಲ, ಸೈಟ್‌ಗಳನ್ನಾಗಿ ಮಾಡಿ ಹಂಚುವುದಕ್ಕಾಗುವುದಿಲ್ಲ. ಇದರಿಂದಾಗಿ ನಾವು ಬೇರೆ ಜಮೀನುಗಳನ್ನು ಆಕ್ವಿಜೈರ್ ಮಾಡಿಕೊಂಡರೂ ಅದು ನಿರುಪಯುಕ್ತವಾಗುತ್ತದೆ. ಇನ್ನು ಎರಡನೆಯದಾಗಿ ಡಿವಿಜನಲ್ ಕಮಿಷನರ್‌ರವರು ಮತ್ತು ಡೆಪ್ಯೂಟಿ ಕಮಿಷನರ್‌ರವರಿಗೆ ಅಧಿಕಾರ ಇದ್ದಾಗ ಆವರೂ ಸಹ ಎಸ್.ಆರ್. ರೇಟ್‌ನ್ನೇ ನೋಡಿಯೇ ಆಕ್ವಿಜೈರ್ ಮಾಡಿಕೊಂಡಾಗ ಕಾಂಪನ್ ಸೇಷನ್ ಹಣವನ್ನು ಫಿಕ್ಸ್ ಮಾಡುವುದು ಅದೇ ರೀತಿಯಾಗಿ ಛೇರ್ಮನ್‌ರವರು ಮಾಡುತ್ತಾರೆ ಆದರಲ್ಲಿ ಏನೂ ಅಂಥಾ ವ್ಯತ್ಯಾಸ ಕಂಡು ಬರುವುದಿಲ್ಲ. ಆದುದರಿಂದ ವಿಸ್ ಯೂಜ್ ಆಗುತ್ತದೆಂದು ಅಪ ನಂಬಿಕೆ ಮಾಡುತ್ತಾ ಹೋದರೆ ಕೆಲಸವಾಗುವುದಿಲ್ಲ. ಆದಂದರಿಂದ ಈ ತಿದ್ದುಪಡಿಗೆ ಒಪ್ಪಿಗೆ ಕೊಡುವುದು ಅವಶ್ಯಕತೆ ಇದೆ.

ಶ್ರೀ ಕೆ.ಎಚ್. ರಂಗನಾಥ್.—ಈಗಿರತಕ್ಕ ಸೆಕ್ಷನ್ ೩ಳಿರಲ್ಲಿ ಏನಿದೆ ಎಂದರೆ, "Subject to provisions of this Act and with the previous approval of the Government" ಎಂದು ಇದೆ. ಇದರ ಬಗ್ಗೆ ಮಂತ್ರಿಗಳವರಿಗೆ ಬಂದರೆ ಅವರು ಕೂಡಲೇ ಆದನ್ನು ಸ್ಕ್ರೂಟಿನಿ ಮಾಡಿ ಕಳುಹಿಸಿ ಕೊಡುತ್ತಾರೆ ಆದರಿಂದ ಏನು ತೊಂದರೆಯಾಗುತ್ತದೆ ?

ಶ್ರೀ ಎಚ್. ಗಂಗಾಧರನ್.—ಡಿ ಸೆಂಟ್ರಲೈಜೇಷನ್ ಆಫ್ ಪವರ್ ಮಾಡುತ್ತಿದ್ದಾರೆ. ಕಂಬ ಕಂಬ ಸುತ್ತಿ ಹಾಕಿಕೊಂಡು ಬರಬೇಕಾದರೆ ಬಹಳ ತಡವಾಗುತ್ತದೆ. ಆದುದರಿಂದ ಅಧಿಕಾರ ವಿಕೇಂದ್ರೀಕರಣವನ್ನು ಮಾಡುತ್ತಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.—ಹಾಗಿದ್ದರೆ ಮಂತ್ರಿಗಳು ಏತಕ್ಕೆ ಬೇಕು, ವಿಧಾನ ಸಭೆ ಏತಕ್ಕೆ ಬೇಕು ? ಅಧಿಕಾರ ವಿಕೇಂದ್ರೀಕರಣ ಮಾಡುವ ಹಾಗಿದ್ದರೆ ಮುಖ್ಯಮಂತ್ರಿಗಳವರು ಏತಕ್ಕೆ, ಮಂತ್ರಿಗಳು ಏತಕ್ಕೆ ? ನನ್ನ ಅನುಭವದಿಂದ ಹೇಳುವುದಾದರೆ ಮಾನ್ಯ ಸದಸ್ಯರಾದ ಶ್ರೀ ಮಹೇಶ್ವರಪ್ಪನವರಿಗೆ ಗೊತ್ತಿದೆ ಅವರನ್ನು ಕೇಳಿ, ದಾವಣಗೆರೆ ವಾಟರ್ ವರ್ಕ್ಸ್‌ನಲ್ಲಿ ಆಕ್ವಿಜಿಷನ್ ಎಷ್ಟಾಗಿದೆ ಸ್ವಾಮಿ ?

ಒಬ್ಬ ಮಾನ್ಯ ಸದಸ್ಯರು.—ಸದಸ್ಯರು ಕಡೆ ತಿರುಗಿ ಏತಕ್ಕೆ ಮಾತನಾಡುತ್ತೀರಿ ಸ್ವಾಮಿ, ಅಧ್ಯಕ್ಷರ ಕಡೆಗೆ ತಿರುಗಿ ಮಾತನಾಡಿ...

ಶ್ರೀ ಕೆ. ಎಚ್. ರಂಗನಾಥ್,—ನಮಗೆ ಇಂಥಾ ಪರಿಸ್ಥಿತಿ ಬರುತ್ತದೆಂದು ಇದ್ದಿದ್ದರೆ ನಾನು ಖಂಡಿತವಾಗಿಯೂ ಚುನಾವಣೆಯಲ್ಲಿ ನಿಲ್ಲುತ್ತಾ ಇರಲಿಲ್ಲ. ಚುನಾವಣೆಯಲ್ಲಿ ನಿಂತಿದ್ದೇವೆ. ಜನ ನಮ್ಮನ್ನು ಆರಿಸಿ ಕಳುಹಿಸಿ ಕೊಟ್ಟಿದ್ದಾರೆ ಆದುದರಿಂದ ನಾವು ಇಲ್ಲಿ ಕೆಲವು ಮುಖ್ಯವಾದ ಸಲಹೆಗಳನ್ನು ಕೊಡಬೇಕಾಗುತ್ತದೆ. ನಿಮ್ಮ ವಯಸ್ಸು ಎಷ್ಟು ಸ್ವಾಮಿ ? ನಾನು ಆಕಸ್ಮಾತ್ ವಿಷಯ ಪ್ರಸ್ತಾಪ ಮಾಡುವಾಗ ಜ್ಞಾಪಕಕ್ಕೆ ಬಂತು ಆದುದರಿಂದ ಅವರ ಕಡೆ ತಿರುಗಿ ಹೇಳುತ್ತಿದೆ. ಅದಕ್ಕೆ ತಾವು ಈ ರೀತಿ ಹೇಳಿ ಸುಮ್ಮನೆ ಸುಮ್ಮನೇ ಒಬ್ಬರ ಮನಸ್ಸನ್ನು ಏತಕ್ಕೆ ನೋಯಿಸುತ್ತೀರಾ ? ಆದುದರಿಂದ ಅಧ್ಯಕ್ಷರೇ, ದಾವಣಗೆರೆ ವಾಟರ್ ವರ್ಕ್ಸ್‌ನಲ್ಲಿ ಒಬ್ಬ ಗೌವರ್ನಮೆಂಟ್ ಪ್ಲೀಡರ್ ಹಾಜರಾಗದೇ ಇದ್ದುದ

ರಿಂದ ಓನರ್ ಒಬ್ಬರಿಗೆ ಲಕ್ಷಾಂತರ ರೂಪಾಯಿ ಕಾಂಪನ್‌ಸೇಷನ್ ಕೊಡಬೇಕಾದ ಪರಿಸ್ಥಿತಿ ಬಂತು... ಇಂಥಾದ್ದೆಲ್ಲಾ ನಡೆಯುತ್ತಾ ಇರುತ್ತದೆ. ಈ ದೃಷ್ಟಿಯಿಂದ ಕಾನೂನು ಮಾಡುವಾಗ ಸ್ವಲ್ಪ ಯೋಚನೆಮಾಡಿ ಮಾಡೋಣ ಎನ್ನುವ ದೃಷ್ಟಿಯಿಂದ ಪ್ರಸ್ತಾಪ ಮಾಡಿದೆನೇ ವಿನಃ ಮಾನ್ಯ ಮಹೇಶ್ವರಪ್ಪನವರು ಪ್ರಸ್ತಾಪ ಮಾಡಿದ್ದಕ್ಕೆ ಹೇಳಲಿಲ್ಲ. ಯಾವ ಕಡೆ ನೋಡಿ ಪ್ರಸ್ತಾಪಮಾಡಬೇಕು ಎಂದು ನನಗೆ ಗೊತ್ತಿದೆ. ಯಾರ ಮನಸ್ಸನ್ನೂ ಅಷ್ಟು ಲಘುವಾಗಿ ನೋಯಿಸಬಾರದೆಂ. ಅದು ಒಳ್ಳೆಯದಲ್ಲ ವೆಂಬ ರಾಮಕೃಷ್ಣರವರ ಅಭಿಪ್ರಾಯ ಇದೆ. ಮಂತ್ರಿಗಳ ಉದ್ದೇಶದ ಬಗ್ಗೆ, ಸರ್ಕಾರದ ಉದ್ದೇಶದ ಬಗ್ಗೆ ನಮಗೆ ಶಂಕೆ ಇಲ್ಲ. ದೊಡ್ಡದೊಡ್ಡ ನಗರಗಳು ಬಡಾವಣೆಯಾಗಬೇಕಾದರೆ ಶೀಘ್ರವಾಗಿ ಆಗ ಬೇಕು. ನೋಟಿಫಿಕೇಷನ್ ಳರಲ್ಲಿ, ಔರಲ್ಲಿ ಇದ್ದಹಾಗೆ ಅವಾರ್ಡ್ ಫಿಕ್ಸ್ ಆಗಬೇಕು ; ಅಗ್ರಿಮೆಂಟ್ ನಿಂದ ಜಾಗ್ರತೆ ಮಾಡುವುದಕ್ಕೆ ಆಗುತ್ತದೆ. ಈಗಿರತಕ್ಕಂಥಾದ್ದನ್ನು ಸರಳಗೊಳಿಸಬೇಕೆಂ ಎಂದೂ ಇದೆ. ಇದೂ ಕೂಡ ಡಿಲೇ ಆಗುತ್ತದೆ. ಡೆಪ್ಯುಟಿ ಕಮಿಷನರಿಗೆ, ಡಿವಿಜನಲ್ ಕಮಿಷನರಿಗೆ ಅಧಿಕಾರ ಕೊಡೋಣ ಎನ್ನುವ ಉದ್ದೇಶದಿಂದ ತಂದಿದ್ದಾರೆ ಇದರಿಂದ ತೊಂದರೆಯಾಗತಕ್ಕಂಥಾದ್ದು ಇದೆ. ಪ್ರಭಾವಯುತ ವ್ಯಕ್ತಿ ಇದ್ದರೆ ಜಾಸ್ತಿ ಹಣ ಕೊಡಲಿಕ್ಕೆ ಬರುತ್ತದೆ. ಮೂಕನಾಗಿರತಕ್ಕಂಥಾವನಿಗೆ ಕಡಿಮೆ ಬೆಲೆ ಕೊಟ್ಟು ಕೊಂಡುಕೊಳ್ಳಲಿಕ್ಕೆ ಬರುತ್ತದೆ. ಕಾಲು ಎಕರೆ, ಅರ್ಧ ಎಕರೆ, ಒಂದು ಎಕರೆ ಇರತಕ್ಕಂಥಾವನಿಗೆ ಈ ಪರಿಸ್ಥಿತಿ ಬರುತ್ತದೆ. ಹೀಗಾಗಾತಕ್ಕ ಪರಿಸ್ಥಿತಿ ಬರುವುದರಿಂದ ತೊಂದರೆ ಯಾಗುತ್ತದೆ, ಇದನ್ನು ದುರುಪಯೋಗಪಡಿಸಿಕೊಳ್ಳುವುದಕ್ಕೆ ಅವಕಾಶವಿದೆ. ತಮ್ಮ ಉದ್ದೇಶ ವಿನಿದೆ ಆ ಉದ್ದೇಶವನ್ನು ಸಫಲಗೊಳಿಸತಕ್ಕಂಥ ರೀತಿಯಲ್ಲಿ ಕಾನೂನು ತರುವುದಕ್ಕೆ ನಮ್ಮ ಅಭ್ಯಂತರ ವಿಲ್ಲ. ಸರ್ಕಾರದ ಉದ್ದೇಶದ ಬಗ್ಗೆ ನಮಗೆ ಶಂಕೆ ಇಲ್ಲ, ಆದರೆ ತಂದಿರತಕ್ಕ ರೂಪ ಚೆನ್ನಾಗಿಲ್ಲ, ಬದಲಾವಣೆ ಮಾಡುವುದು ಯೋಗ್ಯ ಎಂದು ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಹೆಚ್. ಕೆಂಪೇಗೌಡ.—ಮಾನ್ಯ ಅಧ್ಯಕ್ಷರೆ. ಇತ್ತೀಚೆಗೆ ಸರ್ಕಾರದವರು ೮–೧೦ ವರ್ಷಗಳಿಂದ ಲ್ಯಾಂಡ್ ಸೀಲಿಂಗ್ ಆಕ್ಟ್ ಬಂದಮೇಲೆ ಯಾವ ನಗರಗಳಲ್ಲೇ ಆಗಲಿ ಜಮೀನನ್ನು ಆಕ್ವೈರ್ ಮಾಡಿ ಕೊಳ್ಳಲಿಕ್ಕೆ ಆಗಲಿಲ್ಲ. ಮಾನ್ಯ ರಂಗನಾಥ್‌ರವರಿಗೆ ಗೊತ್ತಿದೆ. ಇತ್ತೀಚೆಗೆ ಸರ್ಕಾರದಿಂದ ೧೦ ಎಕರೆ ಒಳಗಡೆ ಇದ್ದರೆ ಟ್ರಸ್ಟ್‌ಬೋರ್ಡಿನವರು ಆಕ್ವೈರ್ ಮಾಡಿಕೊಳ್ಳಬಹುದು ಎಂದು ಒಂದು ಸುತ್ತೋಲೆ ಬಂತು. ಇದು ಬಂದಮೇಲೆ ಆಕ್ವೈರ್ ಪ್ರಾರಂಭವಾಗಿದೆ, ಪ್ರಾರಂಭವಾದರೂ ಕೂಡ ಬೇಗನೆ ಆಗುತ್ತಾ ಇಲ್ಲ. ಕೋರ್ಟಿನಲ್ಲಿ ವ್ಯಾಲ್ಯುಯೇಷನ್ ಫಿಕ್ಸ್ ಮಾಡಿದ್ದಾರೆ. ಅದೂ ಡಿಲೇ ಆಗುತ್ತದೆ, ಈಗ ೫–೧೦ ಎಕರೆ ಒಳಗಡೆ ಇದ್ದರೆ ಸಂಬಂಧಪಟ್ಟ ಡೆಪ್ಯುಟಿ ಕಮಿಷನರ್, ಡಿವಿಜನಲ್ ಕಮಿಷನರ್ ಹೈ ಕೋರ್ಟಿನಿಂದ ಏನು ಬೆಲೆ ಮಿತಿ ಆಗಿದೆಯೋ ಆ ಬೆಲೆಗೆ ಕೊಂಡುಕೊಳ್ಳುವುದಕ್ಕೆ ಅವಕಾಶ ಇರಬೇಕು. ಆಕ್ವಿಸಿಷನ್ ಕಾನೂನು ಪ್ರಕಾರ ಫೈನಲ್ ನೋಟಿಫಿಕೇಷನ್ ಆಗಬೇಕಾದರೆ ವರ್ಷಾನುಗಟ್ಟಲೆ ಆಗುತ್ತದೆ. ಇದು ಎಲ್ಲರ ಅನುಭವದಲ್ಲಿದೆ. ಇದು ದುರುಪಯೋಗ ಏನೂ ಆಗುವುದಿಲ್ಲ ಎಂದು ಬೇಡಿಕೊಳ್ಳುತ್ತೇನೆ. ಈ ತಿದ್ದುಪಡಿಗೆ ಅನುಮತಿ ಕೊಡಬೇಕು ಎಂದು ಪ್ರಾರ್ಥಿಸಿ ಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್.—ನಮ್ಮ ಅನುಮತಿ ಇಲ್ಲದೇ ಇದ್ದರೂ ಪಾಸಾಗುತ್ತದೆ.

ಶ್ರೀ ಎಸ್.ಆರ್, ಬೊವಮ್ಮಾಯಿ.—ಅದು ಬೇಡ. ಮಾನ್ಯ ಮಾಜಿ ಕಾನೂನು ಸಚಿವರು ಮತ್ತು ಹಿರಿಯ ಸದಸ್ಯರಾದಂಥ ಮಾನ್ಯ ರಂಗನಾಥ್‌ರವರು ಹೇಳಿದರಲ್ಲ ಅದರಲ್ಲಿ ಅರ್ಥವಿದೆ, ಇಲ್ಲವೆಂದು ಹೇಳಂವುದಿಲ್ಲ. ಇದರಲ್ಲಿ ಎರಡು ಭಾಗ ಇದೆ. ಮೊದಲನೆ ಭಾಗ ಏನೆಂದರೆ, ಇದು ತೀವ್ರಗತಿಯಿಂದ ಆಗಬೇಕು, ಅದರಲ್ಲೂ ಬೆಳೆಯತಕ್ಕ ನಗರಗಳಲ್ಲಿ ಬಡವರಿಗೆ ನಿವೇಶನಗಳನ್ನು ಹಂಚತಕ್ಕಂಥಾದ್ದು ಬಹಳ ಅತ್ಯಾವಶ್ಯಕ. ಏಕೆಂದರೆ ಅನೇಕ ಕಡೆಗಳಿಂದ ಜನರು ನಗರಗಳಿಗೆ ಬಂದಿದ್ದಾರೆ. ಎಲ್ಲೆಲ್ಲಿ ಸರ್ಕಾರದ ಜಾಗ ಇದೆ ಖಾಸಗಿ ಜಾಗವಿದೆ, ಕಾರ್ಪೊರೇಷನ್ ಜಾಗ ಇದೆ ಅಲ್ಲೆಲ್ಲಾ ಗುಡಿಸಲುಗಳನ್ನು ಹಾಕಿಕೊಂಡು ಕೊಳಚೆ ಪ್ರದೇಶಗಳನ್ನು ನಿರ್ಮಾಣ ಮಾಡಿದ್ದಾರೆ. ಅವರನ್ನು ಒತ್ತಾಯದಿಂದ ಹೊರಗೆ ಹಾಕ ಬೇಕಾಗಿದೆ ; ಹೊರ ಹಾಕುವಂಥ ಪರಿಸ್ಥಿತಿಯಲ್ಲಿ ಸರ್ಕಾರ ಕೂಡ ಇಲ್ಲ. ಇಂತಹ ಒಂದು ವಿಶಿಷ್ಟ ಪರಿಸ್ಥಿತಿ ನಿರ್ಮಾಣವಾಗಿದೆ, ಇದೇರೀತಿ ನಿವೇಶನಗಳನ್ನು ಹಂಚತಕ್ಕ ಬಗ್ಗೆ ತೀವ್ರಗತಿಯಲ್ಲಿ ಕ್ರಮ ತೆಗೆದುಕೊಳ್ಳದೇ ಹೋದರೆ ಸ್ಫೋಟಕ ಪರಿಸ್ಥಿತಿಉದ್ಭವವಾಗುತ್ತದೆ.ಡೆಪ್ಯುಟಿ ಕಮಿಷನರಿಗೆ ಮತ್ತು ಡಿವಿಜನಲ್ ಕಮಿಷನರಿಗೆ ಸರ್ಕಾರದಲ್ಲಿದ್ದ ಅಧಿಕಾರವನ್ನು ಕೊಡುವುದರಿಂದ ಅನೇಕ ಸಲ ಹೆಚ್ಚು ಬೆಲೆಗೆ ಕೊಂಡು ಕೊಳ್ಳತಕ್ಕ ಅವ್ಯವಹಾರ ನಡೆಯುವುದಕ್ಕೆ ಅವಕಾಶವಾಗುತ್ತದೆ ಎಂದು ತಾವು ಹೇಳಿದಿರಿ. ಸರ್ಕಾರಕ್ಕೆ ಇದ್ದ ಅಧಿಕಾರವನ್ನು ಡಿವಿಜನಲ್ ಕಮಿಷನರಿಗೆ ಡೆಲಿಗೇಟ್ ಮಾಡತಕ್ಕಂಥಾದ್ದು ಅದಕ್ಕಿಂತ ಹೆಚ್ಚೇನಲ್ಲ.

ಅವರಿಗೆ ಅಕ್ವಿಸಿಷನ್ ಇಲ್ಲದೆ ಕೊಡತಕ್ಕದ್ದು ಈಗ ಇದೆ. ಅದಕ್ಕೆ ಸರ್ಕಾರದ ಒಪ್ಪಿಗೆ ಪಡೆಯಂಬೇಕಾಗಿದೆ. ಅದರ ಬದಲು ಅವರಿಗೆ ಅಧಿಕಾರ ಕೊಡತಕ್ಕಂಥಾದ್ದು ಈ ಒಂದು ಸಣ್ಣ ತಿದ್ದುಪಡಿ. ಇದರಿಂದ ಅನೇಕ ಕಡೆ ಹೆಚ್ಚು ಬೆಲೆ ಕೊಡತಕ್ಕಂಥಾ ಒಂದು ಅವ್ಯವಹಾರವಾಗುತ್ತದೆ ಎಂದು ತಾವು ಹೇಳಿದಿರಿ. ಒಂದು ಉದಾಹರಣೆ ಕೊಡುತ್ತೇನೆ. ಲ್ಯಾಂಡ್ ಅಕ್ವಿಸಿಷನ್ ಆಕ್ಟ್ ಪ್ರಕಾರ ಸ್ಪೆಷಲ್ ಅಕ್ವಿಸಿಷನ್ ಆಫೀಸರನ್ನು ನೇಮಿಸುತ್ತೇನೆ ದೊಡ್ಡ ದೊಡ್ಡ ಜಲಾಶಯಗಳನ್ನು ಕಟ್ಟುವುದರಲ್ಲಿ ಏನಾಗಿದೆಯೆಂದರೆ, ಮೂಲಪ್ರಭ ಯೋಜನೆ ಒಂದಕ್ಕೆ ಜಮೀನು ಅಕ್ವೈರ್ ಮಾಡುವುದಕ್ಕೆ ಮೂಲತಃ ಯೋಜನೆಯಲ್ಲಿದ್ದದ್ದು ೩೦ ಕೋಟಿ ಮಾತ್ರ. ಮೂಲಪ್ರಭ ಯೋಜನೆ ತಯಾರಾದಾಗ ಭೂಮಿಯನ್ನು ವಶಪಡಿಸಿಕೊಳ್ಳುವುದಕ್ಕೋಸ್ಕರ ೩೦ ಕೋಟಿ ರೂಪಾಯಿಗಳನ್ನು ಮಾತ್ರ ಒದಗಿಸಿದ್ದರು. ಈಗ ಲ್ಯಾಂಡ್ ಅಕ್ವಿಸಿಷನ್ ೩೦೦ ಕೋಟಿರೂಪಾಯಿಗಳು ವಿಚಾರಗಿದೆ.

ಶ್ರೀ ವೈ. ರಾಮಕೃಷ್ಣ.— ರೀಹ್ಯಾಬಿಲಿಟೇಷನ್‌ಗೆ ಇರಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ರಿಹ್ಯಾಬಿಲಿಟೇಷನ್‌ಗೆ ಅಲ್ಲ, ಲ್ಯಾಂಡ್ ಅಕ್ವಿಸಿಷನ್‌ಗೆ. ಅಲ್ಲಿ ಕೆಲವರು ವಕೀಲರು, ಪುಡಾರಿಗಳು ಸೇರಿಕೊಂಡು ೫ ಸಾವಿರ ಇರುವುದಕ್ಕೆ ೧೦ ಸಾವಿರ ಮಾಡಿದ್ದಾರೆ, ೧೦ ಸಾವಿರ ಇರುವುದಕ್ಕೆ ೨೦ ಸಾವಿರ ಮಾಡಿದ್ದಾರೆ. ಇಂತಹ ಅನೇಕ ಉದಾಹರಣೆಗಳಿವೆ, ಆದರ ಬಗ್ಗೆ ರಿಪೋರ್ಟಿನಲ್ಲಿ ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೆ, ನ್ಯಾಯಾಲಯದ ಬಗ್ಗೆ ಇಲ್ಲಿ ಬಹಳ ಗೌರವ ದಿಂದ ಮಾತನಾಡಬೇಕಾಗುತ್ತದೆ. ಆದರ ಬಗ್ಗೆ ಮಾತನಾಡಿದರೆತಪ್ಪಾಗುತ್ತದೆ; ನಾನು ಮಾತನಾಡಬಾರದು. ನಾನು ಜನತೆಯಪ್ರತಿನಿಧಿಯಾಗಿ ಒಂದು ಮಾತನ್ನು ಹೇಳುತ್ತೇನೆ. ಒಂದೇ ಕೋರ್ಟಿನಲ್ಲಿ ಒಂದು ಜಮೀನಿಗೆ ೧೦ ಸಾವಿರಕೊಟ್ಟಿದ್ದರೆ ಪಕ್ಕದ ಜಮೀನಿಗೆ ೩೦ ಸಾವಿರ ಕೊಟಂಥ ನ್ಯಾಯಾಲಯದ ಅವಾರ್ಡ್ ಆಗಿದೆ. ಈ ರೀತಿಅವ್ಯವಹಾರ ನಡೆಯತಕ್ಕಂಥಾದ್ದು, ಲ್ಯಾಂಡ್ ಅಕ್ವಿಸಿಷನ್ ಮುಖಾಂತರ ಹೋದರೆ ಆಗುತ್ತದೆ ಎನ್ನುವ ಅರ್ಥವಲ್ಲ. ರೆಗ್ಯುಲರ್ ಅಕ್ವಿಸಿಷನ್ ಮಾಡಿದರೂ ಆಗುತ್ತದೆ ; ನೆಗೋಸಿಯೇಷನ್ ಮಾಡಿದರೂ ಆಗುವ ಸಂಭವವಿದೆ. ಇದು ಸರಿಯಾಗಿ ಇರಬೇಕು, ಸರಿಯಾಗಿ ಏಪರ್ಾಟು ಮಾಡಬೇಕು ಸೂಪರ್‌ವಿಷನ್ ನೋಡಿಕೊಳ್ಳಬೇಕು, ಆಗ ಮಾತ್ರ ಸರಿಹೋಗುತ್ತದೆ. ನಾವು ಡಿವಿಜನಲ್ ಕಮಿಷನರಿಗೆ ಅಧಿಕಾರ ಕೊಟ್ಟ ಕಾಲಕ್ಕೆ ಅವ್ಯವಹಾರ ನಡೆಯುತ್ತದೆ ಎಂಬ ನಂಬಿಕೆ ಇರುವುದು ಸರಿ ಯಾದುದಲ್ಲ, ಇವತ್ತು ನಗರಗಳ ಬೆಳವಣಿಗೆ ದೃಷ್ಟಿಯಿಂದ ಇವರಿಗೆ ಅಧಿಕಾರ ಕೊಟ್ಟು ಮೇಲ್ವಿಚಾರಣೆ ಏನು ಮಾಡಬೇಕೋ ಅದನ್ನು ಮಾಡೋಣ. ಅಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟ ಮಾತ್ರಕ್ಕೆ ದುರುಪಯೋಗವಾಗುತ್ತದೆ ಎಂದು ಅಲ್ಲ, ಒಳ್ಳೆಯ ರೀತಿಯಿಂದ ಮಾಡುವಂಥ ಅಧಿಕಾರಿಗಳಿದ್ದಾರೆ. ಮೂಲತಃ ಪ್ರಶ್ನೆ ಏನೆಂದರೆ, ನಗರಗಳಲ್ಲಿ ಕೊಡಲೇ ನಿವೇಶನಗಳನ್ನು ಕೊಡುವುದಕ್ಕೆ ಆಡ್ಡಿಯಾಗುತ್ತದೆ. ನನ್ನ ಕ್ಷೇತ್ರದಲ್ಲಿ ೧೧ ವರ್ಷಗಳಾಯಿತು ಒಂದು ಜನತಾ ಮನೆ ಕಟ್ಟಲಿಕ್ಕೆ ಆಗಲಿಲ್ಲ ; ಹೈಕೋರ್ಟಿನಲ್ಲಿದೆ. ಒತ್ತಡದಿಂದ ಮಾಡಿದರೆ ಮತ್ತೆ ಕೋರ್ಟಿಗೆ ಹೋಗುತ್ತಾರೆ. ೧೧ ವರ್ಷಗಳಿಂದ ಒಂದೂ ಕೂಡ ಜನತಾ ಮನೆ ಕಟ್ಟಲಿಕ್ಕೆ ಆಗಲಿಲ್ಲ. ಅಸಿಸ್ಟೆಂಟ್ ಕಮಿಷನರ್ ಹೋಗಿ ನೆಗೋಸಿಯೇಷನ್ ಮಾಡಿ ಹೋದವರ್ಷ ಮನೆ ಕಟ್ಟತಕ್ಕಂಥದ್ದಕ್ಕೆ ಅವಕಾಶ ಸಿಕ್ಕಿದೆ. ನೆಗೋಸಿಯೇಷನ್ ಮಾಡತಕ್ಕ ಕಾಲದಲ್ಲೂ ಕೂಡ ಕೆಲವು ನಿಯಮಗಳಿವೆ. ಪಕ್ಕದ ಜಮೀನು ಎಷ್ಟಕ್ಕೆ ಮಾರಾಟವಾಗಿದೆಯೋ ಅದನ್ನು ಉದಾಹರಣೆಗೆ ತೆಗೆದುಕೊಂಡು ಮಾಡುವುದಕ್ಕಾಗುತ್ತದೆ. ಇದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಗೈಡ್‌ಲೈನ್ಸ್ ಕೊಡುವುದರ ಬಗ್ಗೆ ಕೆಲವು ಕ್ರಮಗಳನ್ನು ತೆಗೆದಂಕೊಳ್ಳಬಹುದು.

ಶ್ರೀ ವೈ. ರಾಮಕೃಷ್ಣ.—ನಾನು ಹೇಳಿದ್ದನ್ನು ಅರ್ಥಮಾಡಿಕೊಳ್ಳಲಿಲ್ಲ. ಅಪ್ಲಿಕೇಷನ್ ಎಲ್ಲಿಗೆ ಹಾಕುವುದು ? ಕರ್ನಾಟಕ ಇಂಪ್ರೂವ್‌ಮೆಂಟ್ ಬೋರ್ಡ್‌ಗೆ ಈಗಾಗಲೇ ಅರ್ಬನ್ ಸೀಲಿಂಗ್ ಆಕ್ಟ್ ತಂದಿದ್ದೀರಿ. ಒಂದು ಉದಾಹರಣೆ ಹೇಳುತ್ತಾ ಇದ್ದೇನೆ ಅಷ್ಟೇ.

ಶ್ರೀ ಎಸ್.ಆರ್. ಬೊಮ್ಮಾಯಿ —ಅರ್ಬನ್ ಸೀಲಿಂಗ್ ಆಕ್ಟ್ ಪ್ರಕಾರ ಬಂದುಬಿಟ್ಟಿದೆ, ಅಲ್ಲಿ ಏಕೆ ಇದನ್ನು ಮಾಡಬೇಕು ಎಂದು ಹೇಳಿದ್ದೀರಿ, ಅರ್ಬನ್ ಸೀಲಿಂಗ್‌ನಲ್ಲಿ ಸರ್ಪ್ಲೆಸ್ ಲ್ಯಾಂಡ್ ಅಕ್ವಿಸಿಷನ್ ಮಾಡತಕ್ಕಂಥಾದ್ದು ಅಲ್ಲ ಇದು. ಕಾನೂನು ನಿಮಗೆ ಗೊತ್ತಿದೆ. ಸರ್‌ಪ್ಲೆಸ್ ಯಾವುದೂ ಅಲ್ಲ. ಅದನ್ನು ಅಕ್ವಿಸಿಷನ್ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಹೆಚ್ಚುಪರಿ ಜಮೀನು ಏನಿದೆ, ಅದು ಯಾವುದೇ ವ್ಯಕ್ತಿಯ ಹತ್ತಿರ ಇದ್ದರೆ ಕೊಡಲೇ ಅದರ ಮೇಲೆ ಸರ್ಕಾರದ ಮಾಲಿಕತ್ವ ಬರುತ್ತದೆ.

೪-೩೦ ಪಿ. ಎಂ.

ಆದುದರಿಂದ ಅದನ್ನು ಅಕ್ವಿಜಿಸನ್ ಮಾಡತಕ್ಕ ಪ್ರಶ್ನೆಯೇ ಇಲ್ಲ. ವಿಶೇಷ ಜಿಲ್ಲಾಧಿಕಾರಿಯವರಂ ಸ್ವಾಧೀನ ಪಡಿಸಿಕೊಂಡು ಅದನ್ನು ನೇರವಾಗಿ ಸಿ.ಐ.ಟಿ.ಬಿ. ಅಥವಾ ಕಾರ್ಪೋರೇಷನ್‌ಗೆ ಕೊಡತಕ್ಕ ಅಧಿಕಾರ ಇದೆ. ಅದಂ ಅಸ್ತಿತ್ವದಲ್ಲಿಲ್ಲ.

ಶ್ರೀ ವೈ. ರಾಮಕೃಷ್ಣ.—೧೦ ಸಾವಿರ ರೂಪಾಯಿಗಳನ್ನು ಕೊಟ್ಟಿರುತ್ತಾರೆ. ಅದರ ಪಕ್ಕದ ಜಮೀನಿಗೆ ಈಗ ನೀವು ತಂದಿರುವ ತಿದ್ದುಪಡಿಯ ಪ್ರಕಾರ ೨ ಲಕ್ಷ ರೂಪಾಯಿಗಳೆಂದು ಭೂಮಿಯ ಮಾಲೀಕ ಹೇಳುತ್ತಾನೆ ಅಷ್ಟು. ಕೊಡುತ್ತೀರಾ ಎಂಬುದೆ ನನ್ನ ಪ್ರಶ್ನೆ. ಆಗ್ಲೋಮರೇಷನ್ ವಿರಯಾದಿಂದ ಒಳಗಡೆ ೧೦ ಸಾವಿರ ರೂಪಾಯಿಗಳನ್ನು ಒಂದು ಎಕರೆಗೆ ಕೊಡುತ್ತಿದ್ದೀರಿ. ಅದರ ಪಕ್ಕದಲ್ಲಿರ ತಕ್ಕ ಭೂಮಿಗೆ ಎಷ್ಟು ಕೊಡಬೇಕು ? ಅವರು ಹೇಳುತ್ತಾರೆ, ೨ ಲಕ್ಷ ಅಂತ. ೨ ಲಕ್ಷ ರೂಪಾಯಿಗಳನ್ನು ಒಂದು ಎಕರೆಗೆ ಕೊಡುತ್ತೀರಾ ಎಂಬುದು ನನ್ನ ಪ್ರಶ್ನೆ. ಅದಕ್ಕೋಸ್ಕರ ನಾನಂ ಸಲಹೆ ಕೊಡುವುದೇನೆಂದರೆ, ಅಕ್ವೈರ್ ಮಾಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಕೆಲವು ಕಡೆ ಅಕ್ವೈರ್ ಮಾಡಿರತಕ್ಕ ಜಮೀನಿನ ಬಗ್ಗೆ ಜಮೀನು ದಾರರು ಕೋರ್ಟಿಗೆ ಹೋದಾಗ, ಕೋರ್ಟಿನಲ್ಲಿ ಕೊಟ್ಟಿರತಕ್ಕ ಪರಿಹಾರ ಕಡಿಮೆ ಎಂದು ತೀರ್ಮಾನ ಮಾಡಿರತಕ್ಕದ್ದೂ ಬೆಂಗಳೂರು ನಗರಕ್ಕೆ ಸಂಬಂಧಪಟ್ಟಂತೇ ಉದಾಹರಣೆಗಳು ಇದ್ದಾವೆ. ಸಾಮಾನ್ಯವಾಗಿ ಕೊಟ್ಟಂತಹ ಪರಿಹಾರ ಸಾಲದು ಅಂತ ಕೋರ್ಟಿಗೆ ಹೋಗುತ್ತಾರೆ. ಮತ್ತೆ ಪರಿಹಾರವನ್ನು ಯಾವ ರೀತಿ ನಿಗದಿ ಮಾಡಬೇಕೆಂಬ ಕಾನೂನು ಇದೆ. ಆ ಕಾನೂನು ಪ್ರಕಾರ ಹೋದರೆ, ತೀರ್ಮಾನ ಮಾಡುವವರು, ಹಿಂದೆ ಅಕ್ವೈರ್ ಮಾಡಿಕೊಂಡ ದಿನದಿಂದ ಲೆಕ್ಕ ಹಾಕಿ, ಅದು ಪೂರ್ಣವಾಗುವವರೆಗೆ ೩-೪ ವರ್ಷಗಳಾದರೆ ೩-೪ ವರ್ಷಗಳ ಸಮಯದಲ್ಲಿ ಪರಿಹಾರವನ್ನು ಕೊಡತಕ್ಕ ದಿನದವರೆಗೆ ಬೆಲೆ ಜಾಸ್ತಿಯಾಗಿದ್ದು, ಕೊಡತಕ್ಕ ಪರಿಹಾರಧನ ಕಡಿಮೆ ಎಂಬ ವಾದ ಕೆಲವು ಸನ್ನಿವೇಶದಲ್ಲಿ ಬಂದಿವೆ. ದುರುಪಯೋಗವಾಗತಕ್ಕ ಸನ್ನಿವೇಶ ಎಲ್ಲಾ ಸನ್ನಿವೇಶದಲ್ಲೂ ಇರುತ್ತದೆ. ಇಲ್ಲ ಅಂತ ಹೇಳುತ್ತಿಲ್ಲ. ಆದರೆ by agreement of the parties, the board, it is liable to be questioned. It is open for discussion. It is not going to be a secret. It is on open deal If the parties agreeable to pay both the members are ready to buy.

ಶ್ರೀ ಸಿದ್ದರಾಮಯ್ಯ.—ಮಾನ್ಯ ಅಧ್ಯಕ್ಷರೇ, ನಗರ ವಿಶ್ವಸ್ಥ ಮಂಡಲಿಗೆ ಹೆಚ್ಚು ಹಣಕಾಸಿನ ಅಧಿಕಾರವನ್ನು ಕೊಡತಕ್ಕಂತಹದ್ದರ ಬಗ್ಗೆ ಈ ತಿದ್ದುಪಡಿಯನ್ನು ತಂದಿದ್ದಾರೆ. ಇದು ಬಹಳ ಸ್ವಾಗತಾರ್ಹವಾದ ಅಂಶ. ಏಕೆಂದರೆ ಅಲ್ಲಿ ಕಾಗದಗಳೇ ಇರತಕ್ಕ ಅಧ್ಯಕ್ಷರಿಗೆ ಸುಮಾರು ೨೫ ಸಾವಿರ ರೂಪಾಯಿಗಳವರೆಗೆ ಅವರೇ ನೇರವಾಗಿ ಕಾರ್ಯಾವರಿಯನ್ನು ಕಾಂಟ್ರಾಕ್ಟ್‌ಗೆ ಕೊಡತಕ್ಕಂತಹ ಅಧಿಕಾರ ಇದೆ. ಅದು ಕಡಿಮೆ ಇದ್ದು, ಹೆಚ್ಚಿನ ಶೀಘ್ರಗತಿಯಲ್ಲಿ ನಿರ್ವೇಶನವನ್ನು ಮಾಡಿ ಮತ್ತೆ ಜನರಿಗೆ ಅದನ್ನು ಆದಷ್ಟು ಜಾಗ್ರತೆ ಕೊಡುವುದಕ್ಕೆ ಅನುಕೂಲವಾಗುತ್ತದೆ ಎಂಬುದು ಒಂದೇ ಉದ್ದೇಶ. ಮತ್ತೆ ಇದರಿಂದ ಏನು ನೆಚ್ಚಿವಾಗುತ್ತದೆ, ಅದನ್ನು ಅವರೇ ಸ್ವಾಧೀನಕ್ಕೆ ತೆಗೆದುಕೊಂಡು ಅದರ ಮೇಲೆ ಸಿವಿಲ್ ಜಡ್ಜ್ ಕೋರ್ಟಿಗೆ ಹೋಗಿ, ಅಲ್ಲಿ ಹೆಚ್ಚು ಪರಿಹಾರವನ್ನು ನಿಗದಿ ಮಾಡತಕ್ಕಂತಹ ಅನಾಮತ ಏನು ಈಗ ಇದೆ, ಅದನ್ನು ತಪ್ಪಿಸಿದಂತಾಗುತ್ತದೆ. ಮತ್ತೆ ಮಾನ್ಯ ವಿರೋಧಪಕ್ಷದ ಸದಸ್ಯರು ಇದರಲ್ಲಿ ದುರ್ವ್ಯವಹಾರ ನಡೆಯುತ್ತದೆಂದು ಆಕ್ಷೇಪ ಎತ್ತಿದ್ದಾರೆ. ಮತ್ತೆ ಬೆಲೆಯನ್ನು ನಿಗದಿಮಾಡತಕ್ಕ ಕೆಲವೊಂದು ಅಂಶಗಳ ಬಗ್ಗೆ ಆಕ್ಷೇಪವನ್ನು ಎತ್ತಿದ್ದಾರೆ. ಇದರಲ್ಲಿ ಪಕ್ಕದ ಜಮೀನಿಗೆ ಎಷ್ಟು ಕ್ರಯ ಇದೆ ಎಂಬುದನ್ನು ನೋಡಿಕೊಂಡೇ ಮಾಡಬೇಕಾಗುತ್ತದೆ. ಅದನ್ನು ಬಿಟ್ಟು ಅವರ ಮನಸ್ಸಿಗೆ ಬಂದ ರೀತಿಯಲ್ಲಿ ದರವನ್ನು ನಿಗಧಿ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಇದನ್ನು ಒಪ್ಪಿಕೊಳ್ಳಬೇಕು ಅಂತ ಹೇಳಿ, ಸ್ವಾಧೀನ ಮಾಡತಕ್ಕ ಭೂಮಿಗೆ ಬೆಲೆಯನ್ನು ನಿಗದಿ ಮಾಡುವುದರ ಬಗ್ಗೆ ಕೇಸ್ ತೀರ್ಮಾನವಾಗಬೇಕಾದರೆ ಬೆಂಗಳೂರಿನವರಿಗೂ ಫೈಲು ಬರಬೇಕಾಗಿತ್ತು. ಮತ್ತೊಂದು ಏನೆಂದರೆ ಆ ವರ್ಷದ ಮಾರ್ಕೆಟ್ ಬೆಲೆ ಎಷ್ಟು ಇರುತ್ತದೆಂಬುದನ್ನೂ ಸಹ ತಿಳಿದುಕೊಂಡು ಬೆಲೆಯನ್ನು ನಿಗದಿ ಮಾಡುವಾಗ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ದುರುಪಯೋಗವಾಗತಕ್ಕಂತಹದ್ದು ಎಲ್ಲ ಕಡೆ ಇದೆ. ದುರುಪಯೋಗವಾದ ರೀತಿಯಲ್ಲಿ ನೋಡಿಕೊಳ್ಳತಕ್ಕಂತಹ ಜವಾಬ್ದಾರಿಯನ್ನು ಸರ್ಕಾರ ವಹಿಸಿ

ಕೊಂಡಿರುವಾಗ ಹೆಚ್ಚು ಅಧಿಕಾರವನ್ನು ಕೊಟ್ಟು, ಜಾಗ್ರತ ನಿವೇಶನಗಳನ್ನು ಹಂಚುವ, ಅಭಿವೃದ್ಧಿ ಮಾಡತಕ್ಕ ಕೆಲಸಗಳಿಗೆ ಅನುಕೂಲವಾಗುತ್ತದೆ. ಆದ್ದರಿಂದ ಈ ತಿದ್ದುಪಡಿ ಸ್ವಾಗತಾರ್ಹವಾದುದು ಎನ್ನತಕ್ಕಂತಹ ಮಾತನ್ನು ಹೇಳಿ, ಈ ತಿದ್ದುಪಡಿಯನ್ನು ಬೆಂಬಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ. ಎಸ್. ಆಚಾರ್ಯ.—ಮಾನ್ಯ ಅಧ್ಯಕ್ಷರೇ, ನಗರಾಡಳಿತ ಸಚಿವರು ನಗರಾಭಿವೃದ್ಧಿ ವಿಶ್ವಸ್ಥ ಮಂಡಲಿಗೆ ಈಗಿನ ಬೆಲೆಯ ಮಟ್ಟವನ್ನು ಅನುಸರಿಸಿ ಅಧಿಕಾರದ ವ್ಯಾಪ್ತಿಯನ್ನು ಹೆಚ್ಚಿಸಿರುವುದು. ಮತ್ತು ಒಪ್ಪಂದ ಮೂಲಕ ನಗರಾಭಿವೃದ್ಧಿ ಮಂಡಲಿಯವರು ಮನೆಗಳನ್ನು ಕಟ್ಟುವುದಕ್ಕೆ ಬೇಕಾದ ಸ್ಥಳವನ್ನು ಖರೀದಿ ಮಾಡಬೇಕಾದರೆ ಅದು ಸರ್ಕಾರಕ್ಕೆ ಬರಬೇಕಾಗಿತ್ತು. ಅದನ್ನು ತಪ್ಪಿಸಿ, ವಿಭಾಗಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳಿಗೆ ಆ ಒಂದು ಅಧಿಕಾರವನ್ನು ಕೊಟ್ಟಿರುವುದು. ಸ್ವಾಗತಾರ್ಹ. ವ್ಯವಹಾರದಲ್ಲಿ ತಡವಾಗುವುದನ್ನು ತಪ್ಪಿಸುವ ಸಲುವಾಗಿ ಅಧಿಕಾರ ವಿಕೇಂದ್ರೀಕರಣವನ್ನು ಮಾಡಿದ್ದಾಗಿದೆ. ಮಾನ್ಯ ನಗರಾಡಳಿತ ಸಚಿವರಿಗೆ ಅನೇಕ ಕಡೆಗೆ ಸಂಬಂಧಪಟ್ಟ ಹಾಗೆ ನಗರಾಡಳಿತ ೧೯೬೪ರ ನಿಯಮಾವಳಿಯಲ್ಲಿ ಅನೇಕ ಅವ್ಯವಹಾರದ ಅಂಶಗಳು ಇವೆ. ಖರ್ಚಿನ ನಿರ್ವಹಣೆಯ ವಿಷಯದಲ್ಲಿ ವಾಹನ ರಿಪೇರಿಗಾಗಿ ಒಂದು ಸಾವಿರದವರೆಗೆ ಸ್ಥಳದಲ್ಲಿರತಕ್ಕ ಅಧಿಕಾರಿಗಳಿಗೆ ಆ ಒಂದು ಅಧಿಕಾರವನ್ನು ಕೊಡುವ ಬಗ್ಗೆ ತಿದ್ದುಪಡಿಯನ್ನು ತಂದು ಅದನ್ನೂ ಕೂಡ ಆದಷ್ಟು ಜಾಗ್ರತೆ ಜಾರಿಗೊಳಿಸುತ್ತೇವೆಂದು ಆಶ್ವಾಸನೆ ಕೊಡಬೇಕು. ನಗರಸಭೆ ಹಾಗೂ ಪುರಸಭೆಗಳಿಗೂ ಸಹ ಬೇರೆ ಬೇರೆ ಅಭಿವೃದ್ಧಿ ಕಾರ್ಯಗಳಿಗೆ ಹಣವನ್ನು ಖರ್ಚು ಮಾಡುವ ವಿಷಯದಲ್ಲಿ ನಗರಾಭಿವೃದ್ಧಿ ವಿಶ್ವಸ್ಥ ಮಂಡಲಿಗೆ ಏನು ಈ ಒಂದು ಅಧಿಕಾರವನ್ನು ಕೊಟ್ಟು, ಅಂತಹ ಕೆಲವು ಒಪ್ಪಂದದ ಮೂಲಕ ಖರೀದಿ ಮಾಡುವುದಕ್ಕೆ ಪುರಸಭೆಗಳಿಗೂ ಅಧಿಕಾರವನ್ನು ಕೊಡಬೇಕು. ಇಲ್ಲದಿದ್ದರೆ ಆಕ್ವಿಜಿಸನ್ ಬಹಳ ನಿಧಾನವಾಗಿ ಬಹಳ ತೊಂದರೆಯ ಪರಿಸ್ಥಿತಿ ಉಂಟಾಗುವುದಕ್ಕೆ ಕಾರಣವಾಗುತ್ತದೆ. ಮತ್ತೆ ಕಚೇರಿಯಲ್ಲಿರತಕ್ಕ ವಾಹನ ರಿಪೇರಿಗಾಗಿ ಅಥವಾ ವಾಹನ ಖರೀದಿಗೆ ಅನುಮತಿಯನ್ನು ಕೊಟ್ಟರೂ ತಿಂಗಳುಗಟ್ಟಲೆ ಸರ್ಕಾರದ ಅನುಮತಿಗಾಗಿ ಕಾಯಬೇಕು. ಒಂದು ಲಕ್ಷ ರೂಪಾಯಿಗಳಿಲ್ಲದೆ ಯಾವ ವಾಹನದ ಚಾಸಿಯೂ ಬರುವುದಿಲ್ಲ. ಆದರೂ ಅವು ಕೂಡಹೆಚ್ಚು ಬಾಳಿಕೆ ಬರಬೇಕಾಗಿದೆ ಇಂತಹ ಅನೇಕ ವ್ಯವಹಾರ ಸಂಗತಿಗಳು ಇವೆ. ನಮ್ಮ ಊರಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ಒಂದು ಸ್ಥಳದಲ್ಲಿ ಕುಡಿಯುವ ನೀರು ಶೇಖರಣೆ ಮಾಡಿ ಅದನ್ನು ಸರಬರಾಜು ಮಾಡಲು ಒಂದು ಸ್ಥಳವನ್ನು ಖರೀದಿ ಮಾಡಬೇಕಾಗಿತ್ತು. ನಾನೂ ಹಾಗೂ ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಹೋದಾಗ, ಆ ಭೂಮಿಯ ಮಾಲೀಕ ನನಗೆ ೨೦ ಸಾವಿರ ರೂಪಾಯಿಗಳನ್ನು ಕೊಡಿ, ಸ್ಥಳವನ್ನು ಬಿಟ್ಟುಕೊಡುತ್ತೇನೆಂದು ಹೇಳಿದ್ದರು. ಆದರೆ ಈಗ ಹಾಲಿ ಇರುವ ಕಾನೂನಿನ ಪ್ರಕಾರ ನಮಗೆ ಅವಕಾಶ ಇರಲಿಲ್ಲ ಮತ್ತೆ ನಾವು ಅದನ್ನು ಕೊಂಡುಕೊಳ್ಳುವ ಹಾಗೂ ಇರಲಿಲ್ಲ ಆದರೆ ಭೂಸ್ವಾಧೀನ ಅಧಿಕಾರಿಯವರು ಅದನ್ನು ಸ್ವಾಧೀನಪಡಿಸಿಕೊಂಡಾಗ, ೨೦ ಸಾವಿರ ರೂಪಾಯಿಗಳನ್ನು ಕೊಡತಕ್ಕಂತಹ ಸ್ಥಳಕ್ಕೆ ೪೭ ಸಾವಿರ ರೂಪಾಯಿಗಳನ್ನು ಕೊಡಬೇಕಾದ ಪ್ರಸಂಗ ಬಂತು ಆದ್ದರಿಂದ ಈ ತಿದ್ದುಪಡಿಯ ಅವಶ್ಯಕತೆ ಇದೆ. ಇದು ಸ್ವಾಗತಾರ್ಹವಾದುದು. ಮತ್ತೆ ಅದೇ ರೀತಿ ಮೈಸೂರು ಮುನಿಸಿಪಾಲಿಟಿ ಆಕ್ಟ್ ೧೯೬೪ರ, ಏನಿದೆ ಇದರಲ್ಲಿ ಇರತಕ್ಕ ಲೋಪದೋಷಗಳನ್ನು ಈಗಾಗಲೇ ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ಅದರ ಬಗ್ಗೆಯೂ ಆದಷ್ಟು ಬೇಗ ತಿದ್ದುಪಡಿಯನ್ನು ತರಬೇಕೆಂದು ಸಲಹೆ ಮಾಡುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೇ, ಪುರಸಭೆ. ನಗರಸಭೆ ಅಂತ ಅಲ್ಲ. ಉದಾಹರಣೆಗಾಗಿ ಹೇಳುವುದಾದರೆ, ಶಿಕಾರಿಪುರ ಪುರಸಭೆಯವರು ೨೦ ಎಕರೆ ಭೂಮಿಯನ್ನು ನಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಬಡವರಿಗೆ ಪುಕ್ಕಟೆಯಾಗಿ ಈಗಾಗಲೇ ನಿವೇಶನಗಳನ್ನು ಕೊಟ್ಟಿದ್ದಾರೆ. ನಮ್ಮಲ್ಲಿ ನೀರಾವರಿ ಜಮೀನಿಗೂ ೧೦ ಸಾವಿರಕ್ಕಿಂತ ಜಾಸ್ತಿ ಇಲ್ಲ. ಅಂತಹ ಜಮೀನಿಗೆ ಇವತ್ತು ಕೋರ್ಟಿನವರು ಬಂದು ೨೫ ಸಾವಿರ ರೂಪಾಯಿಗಳನ್ನು ಒಂದು ಎಕರೆಗೆ ನಿಗದಿ ಮಾಡಿದ್ದಾರೆ. ಇದರಿಂದಾಗಿ ನಾಲ್ಕುವರೆ ಲಕ್ಷ ರೂಪಾಯಿಗಳನ್ನು ಪುರಸಭೆಯವರು ಕಟ್ಟಬೇಕಾಗಿದೆ. ಇದರಿಂದಾಗಿ ಇವತ್ತು ಆ ಪುರಸಭೆಯು ಅಕೌಂಟೆಂಟ್‌ಗೆ ಬಂದಿದೆ. ನಿನ್ನೆ ಬಹಳ ಪ್ರಯತ್ನ ಮಾಡಿ, ನೀವೇ ತೆಗೆದುಕೊಂಡು ಹೋಗಿದ್ದಾರೆ. ಕೇವಲ ೨೫ ಸಾವಿರ ರೂಪಾಯಿಗಳನ್ನು ಕಟ್ಟುವುದಕ್ಕೂ ಸಾಧ್ಯವಿಲ್ಲ. ಕೋರ್ಟಿಗೆ ಬಂದದ್ದರಿಂದ ಎಕರೆಗೆ ೨೫ ಸಾವಿರವಾಯಿತು. ಬಡವರಿಗೆ ಪುಕ್ಕಟೆಯಾಗಿ ಕೊಟ್ಟಿದ್ದಾಗಿದೆ. ಆದರೆ ಕೋರ್ಟಿನವರು ತೀರ್ಮಾನ ಮಾಡಿದ್ದಾರೆ. ಇದರ ಅವಶ್ಯಕತೆ ಬಹಳವಾಗಿ ಇದೆ. ಈಗ ತಿದ್ದುಪಡಿಯನ್ನು ತಂದಿರತಕ್ಕಂಥದ್ದು ಸೂಕ್ತ

ವಾದುದಾಗಿದೆ. ಇದನ್ನು ಪುರಸಭೆ ಹಾಗೂ ನಗರಸಭೆಗಳಿಗೂ ಅನ್ವಯವಾಗುವಂತೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರಿರ್.—ಮೊದಲನೆಯದಾಗಿ ಈಗಿನ ಬೆಲೆಗಳು ಜಾಸ್ತಿಯಾಗಿದೆ ಎಂದು ಹೇಳಲಿಲ್ಲ. ಕಾಂಟ್ರಾಕ್ಟ್ ಕೊಡುವುದಕ್ಕೆ ಆರ್ಥಿಕವಾಗಿ ಅವರಿಗೆ ಅಧಿಕಾರವನ್ನು ಹೆಚ್ಚು ಮಾಡುವ ಬಗ್ಗೆ ಯಾವುದೂ ಭಿನ್ನಾಭಿಪ್ರಾಯವಿಲ್ಲವೆಂದು ಕಾಣುತ್ತದೆ.

ಶ್ರೀ ಕೆ. ಎಚ್. ರಂಗನಾಥ್.—ಇದು ಸಣ್ಣ ಬಿಲ್ಲು ಎಂಬುದಾಗಿ ಗಮನಿಸಿಲ್ಲ. ಇರುವ ವಾಸ್ತವಾಂಶ ಹೇಳುತ್ತೇನೆ,

ಅಧ್ಯಕ್ಷರು.—ಎರಡೇ ಪುಟ ಇರುವುದು.

ಶ್ರೀ ಕೆ. ಎಚ್. ರಂಗನಾಥ್.—ಅಲ್ಲೇ ಇರುವುದು, ಹಣದ ಬೆಲೆ ಜಾಸ್ತಿಯಾಗಿದೆ. ಒಂದು ರೂಪಾಯಿಯನ ಬೆಲೆ ೨೭ ಪೈಸೆಯಾಗಿದೆ. ೧೦ ಸಾವಿರ ರೂಪಾಯಿಗಳವರೆಗೆ ಟ್ರಸ್ಟ್ ಬೋರ್ಡಿನವರೇ ನೇರವಾಗಿ ಕಾಂಟ್ರಾಕ್ಟ್ ಕೊಡುವುದಕ್ಕೆ ಅಧಿಕಾರ ಇತ್ತು. ಅದನ್ನು ಹೆಚ್ಚು ಮಾಡಿದ್ದೇವೆ ಎನ್ನುವ ಅರ್ಥ ಬರುವ ಹಾಗೆ ಆಗುತ್ತದೆ. ಕಾಂಟ್ರಾಕ್ಟ್ ಕೊಡತಕ್ಕ್ಕಂತಹದ್ದು ಇದೆ. ಅದನ್ನು ೧೦ ಸಾವಿರ ಇದ್ದುದನ್ನು ೨೫ ಸಾವಿರದಿಂದ ೨ ಲಕ್ಷದವರೆಗೆ ಮಂಜೂರಾತಿ ಇಲ್ಲದೆ ನೇರವಾಗಿ ಕೊಡತಕ್ಕದ್ದು ಎಂಬುದು ಈ ತಿದ್ದುಪಡಿ ತಂದಿರುವ ಉದ್ದೇಶವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಭೂವಿಯನ್ನು ಕೊಂಡುಕೊಳ್ಳುವಾಗ, ಸೆಕ್ಷನ್ ೩೫ರಲ್ಲಿ.....ಹೇಳಿರುವ ಪ್ರಕಾರವಾಗಿ ನಮಗೆ ಕಾಲವಕಾಶ ಇಲ್ಲದಿದ್ದುದರಿಂದ ಅಮೆಂಡ್‌ಮೆಂಟ್ ಪಗ್ಗೆರೆ ಕೊಡತಕ್ಕ ಪರಿಸ್ಥಿತಿ ಬರಲಿಲ್ಲ ಬಹುಮತ ಇದೆ ಎಂಬುದಾಗಿ ಪಾಸ್ ಮಾಡಿಕೊಳ್ಳಬಹುದು. ನಾಳೆಯೂ ಪಾಸ್ ಮಾಡಿ ಕೊಡುತ್ತೇವೆ, ಅಧಿಕಾರ ಇದೆ ಅಂತ ಈ ತರಹದ ಕಾನೂನನ್ನು ಪಾಸ್ ಮಾಡುವುದು ಸೂಕ್ತವೇ ಎಂಬುದನ್ನು ಯೋಚನೆ ಮಾಡಬೇಕು. ಆ ದೃಷ್ಟಿಯಿಂದ ಮಾನ್ಯ ಮಂತ್ರಿಗಳಲ್ಲಿ ಹೇಳುವುದೇನೆಂದರೆ, ಸ್ವಲ್ಪ ನಿಧಾನ ಮಾಡಿ, ಪಾಸ್ ಮಾಡಿ ಕೊಡುತ್ತೇವೆ. ಶೀಘ್ರವಾಗಿ ನಗರದ ಬಡಾವಣೆಗಳನ್ನು ಮಾಡುವುದಕ್ಕೋಸ್ಕರ ಭೂಮಿಯನ್ನು ತೆಗೆದುಕೊಳ್ಳಬೇಕು, ಅದಕ್ಕೆ ವ್ಯವಸ್ಥೆ ಮಾಡಿಕೊಳ್ಳಬೇಕು ಎಂಬ ಸದಭಿಪ್ರಾಯದಲ್ಲಿ ಭಿನ್ನಾಭಿಪ್ರಾಯವಿಲ್ಲ.

ಆದರೆ ಈ ಕಾನೂನು ದುರುಪಯೋಗವಾಗಲಿಕ್ಕೆ ಸಾಧ್ಯತೆ ಇದೆ ಎಂಬ ಬಗ್ಗೆ ಅಭಿಪ್ರಾಯ ವ್ಯಕ್ತ ಮಾಡುತ್ತಿದ್ದೇವೆ. ನಾವು ಇದನ್ನು ಪಾಸ್ ಮಾಡಿಕೊಡಬಹುದೆಂದು ಒಪ್ಪಿಕೊಂಡಿದ್ದರಿಂದ ಇದರ ಬಗ್ಗೆ ತಿದ್ದುಪಡಿಗಳನ್ನು ಕೈಬಿಟ್ಟಿಲ್ಲ, ಮತ್ತು ಅಭಿಪ್ರಾಯಗಳನ್ನು ವ್ಯಕ್ತ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಆದರೆ ಮಂತ್ರಿಗಳು ಇವತ್ತು ಇದನ್ನು ಸಭೆಯ ಮುಂದೆ ಮಂಡಿಸಿ ಪಾಸ್ ಮಾಡಿಕೊಳ್ಳುವುದರ ಬದಲಾಗಿ ಇನ್ನೊಂದು ದಿವಸ ತೆಗೆದುಕೊಂಡು ಬಂದರೆ ಸೂಕ್ತವೆಂದು ನನ್ನ ಸಲಹೆ ಏಕೆಂದರೆ ೨೫ ಸಾವಿರ ರೂಪಾಯಿಗಳಿಂದ ಎರಡು ಲಕ್ಷ ರೂಪಾಯಿಗಳವರೆಗೆ ಕೆಲಸ ಮಾಡಿಸುವುದಕ್ಕೆ ಬೋರ್ಡಿನವರಿಗೆ ಅಧಿಕಾರ ಕೊಡುತ್ತಿದ್ದೇವೆಂದು ಈ ತಿದ್ದುಪಡಿಯಲ್ಲಿ ಹೇಳಿದ್ದಾರೆ. ಅಲ್ಲದೆ, ವೆಗೋಷಿಯೇಷನ್ ವಿಚಾರದಲ್ಲಿ ಕೂಡ ಬಹಳ ಕಾಂಪ್ಲಿಕೇಷನ್ ಇದೆ. ಇದನ್ನು ಮಾನ್ಯ ಮಂತ್ರಿಗಳೂ ಗಮನಿಸಿದ್ದಾರೋ ಇಲ್ಲವೋ ಗೊತ್ತಿಲ್ಲ. ಹಳೇಯ ಕಾನೂನಿನಲ್ಲಿ ಕೂಡ ತೊಂದರೆ ಇದೆ. ಅದನ್ನು ಹೇಗೆ ಪರಿಹಾರ ಮಾಡಬೇಕೆಂಬುದನ್ನು ಯೋಚನೆ ಮಾಡಬೇಕಾದ ಅವಶ್ಯಕತೆ ಇದೆ. It is stated that, "subject to the provisions of this Act and with the previous approval of the Government the Board may enter into an agreement with the owner of any land or any interest.... what type of interest? There are so many conflictory interests. ನಾವು ಧಾಗ ಆಗಿರುವುದಿಲ್ಲ, ನನಗೆ ಈ ಭಾಗದ್ದು ಬೇಕಾಗಿಲ್ಲ, ಆ ಭಾಗದ್ದು ಕೊಡಬೇಕೆಂದು ಹೇಳುತ್ತಾರೆ.

Sri Y. Ramakrishna.—The officers determine the persons who are interested...

SRI LAKSHMISAGAR.—When a sale is contemplated the purchasor has all the remedies open to him to get clearance of the land that is being purchased as to whether there is any encumberance, wether there is any interest or partial interest or a portion of interest and whether it is simple mortgage or usufructuary mertgage. All these things will be gone into interms of the Transfer of property Act. When a purchaser want to buy it, he will go into all the aspects of the matter before the sale is struck

ಶ್ರೀ ಕೆ. ಹೆಚ್. ರಂಗನಾಥ್.—ನಾನು ಏನು ಹೇಳುತ್ತಿದ್ದೆ ಎಂದರೆ, ತಿದ್ದುಪಡಿ ಬಗ್ಗೆ ಅಷ್ಟೇ ಅಲ್ಲ, ಈಗಿರತಕ್ಕ ಕಾನೂನನ್ನು ನೋಡಬೇಕಾಗಿದೆ ಎಂದು. ಸೆಕ್ಷನ್ ೩೪ರಲ್ಲಿ ಏನು ಮಾಡುತ್ತಿದ್ದಾರೆಂದರೆ ಅದಕ್ಕೆ ಪ್ರಾಎಜನ್‌ಹಾಕುತ್ತಿದ್ದಾರೆ. ಆ ಸೆಕ್ಷನ್‌ನಲ್ಲಿ owner of any land or nay interest therein whether situated within or without the urban area...'' ಎಂದು ಇದೆ. ಅದೂ ಕೂಡ ತಿದ್ದುಪಡಿಗೆ ಅರ್ಹವಾಗಿರತಕ್ಕದ್ದಾಗಿದೆ. ಇದರಿಂದ ಲಿಟಿಗೇಷನ್ ಪೂರ್ಣ ಮುಕ್ತವಾಗಿ ಏನೂ ಕೊಂದರೆ ಇಲ್ಲದೆ ಇರತಕ್ಕ ಆಸ್ತಿಯನ್ನು ತೆಗೆದುಕೊಳ್ಳತಕ್ಕ ಪ್ರಯತ್ನ ಇಲ್ಲಿ ನಡೆದಿಲ್ಲ.

SRI A. LAKSHMISAGAR.—Who is a owner in terms of the Transfer of property Act ? A owner is one who has full right, title and interest therein in the property. Section 54 of the Transfer of property Act is very clear.

ಶ್ರೀ ಕೆ. ಹೆಚ್. ರಂಗನಾಥ್.—ಸಿವಿನೇ ಸೆಕ್ಷನ್ ಪ್ರಾಪರ್ಟಿ ಆಕ್ಟ್‌ಗೆ ವಿರುದ್ಧ ಹೋಗುತ್ತದೆ ?

SRI A. LAKSHMISAGAR.—It is in terms of the provisions of Transfer of property Act.

ಶ್ರೀ ಬಿ. ಎಸ್. ಎಡಿಯೂರಪ್ಪ.—ಒಂದೇ ಕಡೆ ೪ ಜನ ವಕೀಲರೂ ಸೇರಿದರೆ ಎಷ್ಟು ಅನಾಹುತ ವಾಗುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ಅನಾಹುತವೇನೂ ಆಗುವುದಿಲ್ಲ. ಇಲ್ಲಿ ಏನಿದೆ ಎಂದರೆ ''agreement with the owner of any land or any interest therein.' ಅಂಥ ಮಾಡುವಾಗ ವಾಜ್ಯದಿಂದ ವಿಮುಕ್ತವಾಗಿರತಕ್ಕ ಸೆಕ್ಷನ್ ಆಗುತ್ತದೆ. ಅದರೆ ಈಗಿರತಕ್ಕದ್ದು ತೊಡಕಿನಿಂದ ಕೂಡಿದೆ, ಅದನ್ನು ಬದಲಾವಣೆ ಮಾಡಬೇಕಾಗುತ್ತದೆ. ಈಗ ತಂದಿರುವುದು ಇನ್ನೂ ತೊಂದರೆಯಾಗುವುದು ಇದೆ. ಅದಕ್ಕೆ ಇನ್ನೊಂದು ದಿವಸ ತನ್ನಿ ಎಂದು ಹೇಳಿದೆ. ನೀವು ಪಾಸ್ ಮಾಡಿಕೊಳ್ಳುವುದಾದರೆ ಮಾಡಿಕೊಳ್ಳಿ.

SRI A. LAKSHMISAGAR.—Objects and reasons ಅನ್ನು ಓದುತ್ತೇನೆ ತಿದ್ದುಪಡಿ ಕಾಯಿದೆ ಏನಿದೆ ಅದನ್ನು ಇಂಟರ್‌ಪ್ರಿಟ್ ಮಾಡುತ್ತಿಲ್ಲ.

SRI K. H. RANGANATH.—Iam sorry, I am reading the extract from theKarnataka Improvement Boards Act 1976- Section-34.

SRI A. LAKSHMISAGAR.—That is exactly what I am saying provided that the Board may enter into the agreement with the previous approval of the Deputy Commissioner of the District where the total areas.....

ಶ್ರೀ ಕೆ. ಹೆಚ್. ರಂಗನಾಥ್.—ಪಾಲಿ ಇರತಕ್ಕ ಕಾಪೂನಿನಲ್ಲಿ ತೊಂದರೆಯಿಂದ ಕೂಡಿರತಕ್ಕ ಸೆಕ್ಷನ್ ಇದೆ.

ಅಧ್ಯಕ್ಷರು.—"or interest therin"...ಎಂದು ಇದೆ ನೋಡಿ.

ಶ್ರೀ ಕೆ. ಹೆಚ್. ರಂಗನಾಥ್.—ಒಂದು ನಿಮಿಷ ಕಾಲಿತು ಗವನಿಸಿದರೆ ಸಭೆಯ ಕಾಲ ಉಳಿಯುತ್ತದೆ. ಈಗಿರತಕ್ಕ ಕಾನೂನಿಗೆ ತಿದ್ದುಪಡಿ ತರಲು ಪ್ರಯತ್ನ ಮಾಡಿರುವ ನಿಯಮಂ ಏನಿದೆ ಅದಂ ವಾಜ್ಯದಿಂದ ವಿಮುಕ್ತವಾಗಿಲ್ಲ. ಆದರಲ್ಲಿ ವಾಜ್ಯ ಪೂಡುವುದಕ್ಕೆ ಸಾಕಷ್ಟು ಅವಕಾಶ ಇರುವುದರಿಂದ ಅದೂ ಕೂಡ ಪರ್ಯಾಲೋಚನೆಗೆ ಯೋಗ್ಯವಾಗಿರತಕ್ಕದ್ದಾಗಿದೆ. ತಾವು ತಂದಿರತಕ್ಕದ್ದು ಇನ್ನೂ ಕೊಡಕನ್ನುಂಟು ಪೂಡುತ್ತದೆ, ಅಷ್ಟೇ ಅಲ್ಲ ಹಣ ದುರುಪಯೋಗವಾಗುವುದಕ್ಕೆ ಅದರಲ್ಲಿ ಅವಕಾಶ ಇದೆ. ಆದ್ದರಿಂದ ನಾನು ವಿಚಂತಿ ಮಾಡಿಕೊಳ್ಳುವುದೇನೆಂದರೆ, ತಮಗೆ ಸಾಧ್ಯವಾದರೆ ಯೋಚನೆ ಮಾಡಿ ನಾಳೆ ಇದನ್ನು ಸಭೆಯ ಮುಂದೆ ತನ್ನಿ ಎಂದು ಇದರ ಉದ್ದೇಶದ ಬಗ್ಗೆ ನಮಗೆ ಭಿನ್ನಾಭಿಪ್ರಾಯ ಇಲ್ಲ. ನಾವು ಪಾಸ್ ಮಾಡಿಕೊಳ್ಳುತ್ತೇವೆ. ಆದರೆ ಆ ನಿಯಮ ದೋಷದಿಂದ ಮುಕ್ತವಾಗಿರಬೇಕು. "any owner or any interest" ಅಂದರೆ ಎಷ್ಟು ದಿನದವರಿಗೆ ವಾಜ್ಯ ಮಾಡಬಹುದು. ? Should we involve the trust board in this type of litigation ? ಆ ಪ್ರಶ್ನೆಯನ್ನು ನಾನು ಕೇಳುತ್ತಿರುವುದು

MR. SPEAKER.—The interpretation of the Hon'ble Minister is that, whatever the definition that gives, it is well within the purview of Section 54 of the Transfer of Property Act i.e. the right, title and interest shall prevail.

ಶ್ರೀ ಕೆ. ಹೆಚ್. ರಂಗನಾಥ್.—ಈ ಸೆಕ್ಷನ್‌ನಲ್ಲಿ ಬರೆದಿದ್ದಾರಲ್ಲ ಸ್ವಾಮಿ ಅದು ನನ್ನ ಹತ್ತಿರ ಪೂರ್ಣ ಆ್ಯಕ್ಟ್ ಇಲ್ಲ. ಸೆಕ್ಷನ್ ಮಾತ್ರ ಇದೆ.

ಶ್ರೀ ಹೆಚ್. ಗಂಗಾಧರನ್.—'interest therein.' ಎಂದು ಅಲ್ಲಿಗೆ ನಿಲ್ಲುವುದಿಲ್ಲ, purchase or lease ಎಂದೂ ಇದೆ.

ಶ್ರೀ ಕೆ. ಹೆಚ್. ರಂಗನಾಥ್.—ತಾವು ವಕೀಲರು, ತಮಗೆ ಗೊತ್ತಿದೆ, ಆದರೆ ಅವಸರದಲ್ಲಿ ಓದುವುದಕ್ಕೆ ಹೊರಟಿದ್ದೀರಿ...

ಶ್ರೀ ಎಂ. ಚಂದ್ರಶೇಖರ್.—ಇಂಟಿಗ್ರೇಟೆಡ್ ಅರ್ಬನ್ ಡೆವಲಪ್‌ಮೆಂಟ್ ಪ್ಲಾನ್ ಎಂಬ ಕೇಂದ್ರ ಸರ್ಕಾರದ ಯೋಜನೆಗೆ ಅವರು ೨೮೦ ಲಕ್ಷ ರೂಪಾಯಿಗಳನ್ನು ಕೊಟ್ಟು ಮಾಡಿ ಎಂದು ಹೇಳಿರುವುದು ಇವತ್ತಿಗೂ ನಮಗೆ ೮೦ ರಿಂದ ೯೦ ಲಕ್ಷ ರೂಪಾಯಿಗಳವರೆಗೆ ವೆಚ್ಚವಾಗುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ಮೂರು ತಿಂಗಳಲ್ಲಿ ನೀವು ಖರ್ಚು ಮಾಡಿ, ಮತ್ತು ಅದಕ್ಕೆ ಬೇಕಾದ ಕಾನೂನು ತನ್ನಿ. ಆದರೆ ವಾಜ್ಯಕ್ಕೆ ಒಳಗಾಗುವಂಥ ಕಾನೂನು ತರಬೇಡಿ.

ಶ್ರೀ ಎಂ. ಚಂದ್ರಶೇಖರ್.—ಇದು ಒಬ್ಬ ವ್ಯಕ್ತಿಯ ತೀರ್ಮಾನ ಅಲ್ಲ. ಬೋರ್ಡ್ ಎಂದರೆ ೫-೬ ಜನ ಅಧಿಕಾರಿಗಳು ಇರತಕ್ಕದ್ದು. ಅವರು ತೀರ್ಮಾನ ತೆಗೆದುಕೊಳ್ಳುವಾಗ ಸರ್ಕಾರದ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ತೀರ್ಮಾನ ತೆಗೆದುಕೊಳ್ಳುತ್ತಾರೆ. ಅದರಲ್ಲಿ ವಿಕೆ ಅನಾವಶ್ಯಕವಾಗಿ ಇಟ್ಟುಕೊಳ್ಳಬೇಕು ? ಆದುದರಿಂದ. ಯಾವುದೇ ಒಂದು ಸಣ್ಣ ಜಮೀನನ್ನು ತೆಗೆದುಕೊಳ್ಳಬೇಕಾದರೂ ಕೂಡ ನಿಮಗೆ ಗೊತ್ತಿರುವ ಹಾಗೆ ಆರ್ಥಿಕ ಇಲಾಖೆಗೆ ಹೋಗಿ ತಿರುಗಿ ವಾಪಸ್ಸು ಬರಬೇಕಾದರೆ ಎರಡು ವರ್ಷವಾಗುತ್ತದೆ. ಒಬ್ಬ ಜಿಲ್ಲಾಧಿಕಾರಿಗೆ ಇಂತಿಷ್ಟು, ವಿಭಾಗಾಧಿಕಾರಿಗಳಿಗೆ ಇಂತಿಷ್ಟು ಎಂದು ಜವಾಬ್ದಾರಿ ಇರುತ್ತದೆ. ಅವರೆಲ್ಲ ಜವಾಬ್ದಾರಿ ಅಧಿಕಾರಿಗಳಾಗಿರುವುದರಿಂದ ಅವರ ಪರವಾನಗಿಯನ್ನು ಬೋರ್ಡಿನವರು ತೆಗೆದುಕೊಳ್ಳಬೇಕು. ಆದ್ದರಿಂದ ಅಲ್ಲಿ ಒಬ್ಬ ವ್ಯಕ್ತಿಯ ತೀರ್ಮಾನ ಎಂಬ ಪ್ರಶ್ನೆ ಬರುವುದಿಲ್ಲ. ಅಲ್ಲಿ ಸುಮಾರು ೭-೮ ಜನ ಜವಾಬ್ದಾರಿ ಹೊತ್ತ ಅಧಿಕಾರಿಗಳು ಇರುತ್ತಾರೆ. ಅವರು ಪೂರ್ಣವಾಗಿ ಪರಿಶೀಲನೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತಾರೆ.

ಅಧಿಕಾರ ವಿಕೇಂದ್ರೀಕರಣ ಆಗಲಿ, ಪ್ರತಿಯೊಂದಕ್ಕೂ ಸರ್ಕಾರಕ್ಕೆ ಬಂದು ಹೋಗಬೇಕಾದರೆ ನಿಧಾನವಾಗುತ್ತದೆ ಎಂಬ ಉದ್ದೇಶದಿಂದ ಇದನ್ನು ತಂದಿದ್ದೇವೆ. ಹಿಂದುಳಿದವರ್ಗದವರಿಗೆ, ಹರಿಜನಗಿರಿಜನರಿಗೆ ಸಾವಿರಾರು ಸೈಟುಗಳನ್ನು ಕೊಡಬೇಕಾಗಿದೆ. ಅದನ್ನೆಲ್ಲಾ ಕೊಡಬೇಕಾದರೆ ಮತ್ತು ಕೆಲಸ ಬೇಗ ಆಗ ಬೇಕಾದರೆ ಈ ಮಸೂದೆ ಅವಶ್ಯಕವಾಗಿದೆ. ಆದ್ದರಿಂದ ಇದನ್ನು ದಯವಿಟ್ಟು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು —ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮುಂದಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ.—''೧೯೮೩ನೇ ಇಸವಿಯ ಕರ್ನಾಟಕ ರಾಜ್ಯದ ಅಭಿವೃದ್ಧಿ ಮಂಡಲಿಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡಗಳ ಪರ್ಯಾಲೋಚನೆ ಖಂಡ ೨ ರಿಂದ ೩.

ಅಧ್ಯಕ್ಷರು.—ಈ ವಿಧೇಯಕವನ್ನು ಖಂಡ ಖಂಡವಾಗಿ ಮುಂದಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ ಎರಡು ಮತ್ತು ಮೂರನೇ ಖಂಡಗಳು ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕೃತವಾಯಿತು.—(ಎರಡು ಮತ್ತು ಮೂರನೆಯ ಖಂಡಗಳು ವಿಧೇಯಕದ ಅಂಗವಾದವು)

ಮೊದಲನೆಯ ಖಂಡ ಇತ್ಯಾದಿ.

ಅಧ್ಯಕ್ಷರು.—ಪ್ರಸ್ತಾವವೇನೆಂದರೆ ''ಮೊದಲನೆಯ ಖಂಡ ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗವಾಗಿರಂತ್ತದೆ.''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು. (ಪ್ರಥಮ ಖಂಡ. ಹೆಸರು ಮತ್ತು ಅವತರಣಿಕೆಗಳು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಅನುಮೋದನಾ ಪ್ರಸ್ತಾವ.

ಶ್ರೀ ಎಂ. ಚಂದ್ರಶೇಖರ್ (ಮಾನ್ಯ ನಗರಾಡಳಿತ ಮಂತ್ರಿಗಳು.—''೧೯೮೩ನೇ ಇಸವಿಯ ಕರ್ನಾಟಕ ಅಭಿವೃದ್ಧಿ ಮಂಡಲಿಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ''

ಅಧ್ಯಕ್ಷರು ಪ್ರಸ್ತಾವವೇನೆಂದರೆ.—''೧೯೮೩ನೇ ಇಸವಿಯ ಕರ್ನಾಟಕ ಅಭಿವೃದಿ ಮಂಡಲಿಗಳ (ತಿದ್ದುಪಡಿ) ವಿಧೇಯಕವನ್ನು ಅನುಮೋದಿಸುವುದು.,,

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಅನುಮೋದನೆ ನೀಡಲಾಯಿತು.

ಅಧ್ಯಕ್ಷರು.—ಈಗ ಸಮಯ ೫ ಗಂಟೆ ಆಗಿದೆ. ಇನ್ನೂ ಎರಡು ಮಸೂದೆಗಳಿವೆ.

ಶ್ರೀ ಎಂ. ಚಂದ್ರಶೇಖರ್.—ಇದು ಬರೀ ಡಿಲಿಷನ್ ಮಾಡುವುದಷ್ಟೆ ಹೆಚ್ಚು ಏನೂ ಇಲ್ಲ.

ಶ್ರೀ ಎನ್. ಜಿ. ನಾಯಕ್.—೫ ಗಂಟೆಗೆ ಮುಗಿಯಬೇಕು ಎಂದಮೇಲೆ ಮುಂಗಿಸಬೇಕು. we have to follow the discipline.

೧೯೮೩ನೇ ಇಸವಿಯ ಕರ್ನಾಟಕ ಬಯಲು ಪ್ರದೇಶಗಳಿಗೆ ಸಂಬಂಧಿಸಿದ (ವಿರೂಪಗೊಳಿಸುವುದನ್ನು ತಡೆಗಟ್ಟುವುದು) (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ ಚಂದ್ರಶೇಖರ್.—(ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು)

ಮಾನ್ಯ ಅಧ್ಯಕ್ಷರೆ.—೧೯೮೩ನೇ ಇಸವಿಯ ಕರ್ನಾಟಕ ರಾಜ್ಯದ ಬಯಲು ಪ್ರದೇಶಗಳಿಗೆ ಸಂಬಂಧಿಸಿದ (ವಿರೂಪಗೊಳಿಸುವುದನ್ನು ತಡೆಗಟ್ಟುವುದು) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಪ್ರಸ್ತಾವವನ್ನು ಸೂಚಿಸಲಾಯಿತು